## ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆ

೩–೩೦ ಪಿ.ಎಂ.

† ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು).—ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸಲು ಮಂಡಿಸಿದ ನಿರ್ಣಯವನ್ನು ಸವಂರ್ಥಿಸುತ್ತಾ ಕೆಲವು ವಿಷಯಗಳನ್ನು, ನನ್ನ ಅನಿಸಿಕೆಗಳನ್ನು ಹೇಳಬಯಸುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ನಾನೂ ಕೂಡ ಹಳ್ಳಿಗಾಡಿನಿಂದ ಬಂದಂಥ ರೈತನ ಮಗ. ಜೊತೆಗೆ ಬರಗಾಲ ಯಾವ ಸ್ಥಿತಿಯಲ್ಲಿದೆ, ರೈತ ಯಾವ ಸಂಕಷ್ಟಕ್ಕೆ ಒಳಗಾಗಿದ್ದಾನೆ ಎಂದು ತಿಳಿದಿರತಕ್ಕ ಜನ. ಆ ಭಾಗದಿಂದ ಬಂದಿರತಕ್ಕ ಅನೇಕ ಮಾನ್ಯ ಸದಸ್ಯರೂ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ಇರತಕ್ಕಂಥ ವಾಸ ವಾಂಶವನ್ನು ಹೇಳತಕ್ಕದ್ದು ನಿಜ. ಕಾರಣವೇನೆಂದರೆ ಇಡೀ ಕರ್ನಾಟಕದಲ್ಲಿ ೧೯ ಜಿಲ್ಲೆಗಳಲ್ಲೂ ಕ್ಷಾಮ ಇದೆ. ನಮ್ಮ ಅನುಭವದಲ್ಲಿ ಹೇಳುವುದಾದರೆ, ನಾನು ತಾಲ್ಲೂಕು ಅಭಿವೃದ್ಧಿ ಮಂಡಲಿ ಸದಸ್ಯನಾಗಿ ೧೦–೧೬ ವರ್ಷ ಕೆಲಸ ಮಾಡಿದ್ದೇನೆ, ಪಂಚಾಯಿತಿ ಛೇರ್ಮನ್ನಾಗಿ ಕೆಲಸ ಮಾಡಿದ್ದೇನೆ. ತಮ್ಮ ಭಾಗದಲ್ಲಿ ಪ್ರತಿವರ್ಷ ಬರಗಾಲ ಇದ್ದೇ ಇದೆ. ಬರಗಾಲದ ಅನುಭವವನ್ನು ನಾವು ಪಡೆದಿದ್ದೇವೆ. ಬರಗಾಲವನ್ನು ನೋಡಿದ್ದೇವೆ. ಸಾಮಾನ್ಯವಾಗಿ ಒಂದು ಜಿಲ್ಲೆಯ ೨ ಹೋಬಳಿ, ಒಂದು ತಾಲ್ಲೂಕು ಅಥವಾ ಎರಡು ತಾಲ್ಲೂಕುಗಳಲ್ಲಿ ಬರ ಬರುತ್ತಿತ್ತು. ಆದರೆ ಇವತ್ತು ಸಮಗ್ರ ಕರ್ನಾಟಕದಲ್ಲಿ ವ್ಯಾಪಕವಾಗಿ ಮಂಳೆ ಇಲ್ಲದೆ ಬರಗಾಲ ಬಂದು ವ್ಯಾಪಕವಾಗಿ ಸಂಕಷ್ಟದಲ್ಲಿರಬೇಕಾದರೆ ಯಾರೂ ಕೂಡ ಇದರ ಬಗ್ಗೆ ವ್ಯಾಖ್ಯಾನ ಮಾಡತಕ್ಕ ವಿಚಾರ ಏನಿಲ್ಲ. ನಾನು ಒಂದು ಮಾತನ್ನು ಹೇಳುತ್ತೇನೆ. ೧೯೬೪ ರಿಂದ ಅವಿಚ್ಛಿನ್ನವಾಗಿ ಕ್ಷಾಮ ಇತ್ತು. ಆಗ ಆ ಕಡೆ ಇರತಕ್ಕ ಸ್ನೇಹಿತರು ಅಳುತ್ತಿದ್ದರು. ೧೯೮೨ ರಲ್ಲೂ ಕ್ಷಾಮ ಇತ್ತು. ಬರ ಬಂದು ಜನ, ದನ ಕಷ್ಟಪಡತಕ್ಕ ಪರ್ವ ಕಾಲದಲ್ಲಿ ಯಾವ ಸರ್ಕಾರವೂ ಬಂಗಾರದ ಹೊಳೆ ಹರಿಸಲಿಲ್ಲ. ಇಂತಹ ಕಾಲದಲ್ಲಿ ಸಾಮಾನ್ಯವಾಗಿ ಜನರಿಗೆ ಕೆಲಸ ಒದಗಿಸತಕ್ಕದ್ದು, ಕುಡಿಯಂವ ನೀರನ್ನು ಒದಗಿಸತಕ್ಕದ್ದು, ಆಹಾರವನ್ನು ಒದಗಿಸತಕ್ಕದ್ದು ಸರ್ಕಾರದ ವ್ಯಾಪಕ ಕಾರ್ಯಕ್ರಮ. ಸಾಮಾನ್ಯವಾಗಿ ಆಹಾರ ಸಿಗದೇ ಹೋದರೆ ಸರ್ಕಾರ ಕಷ್ಟಪಟ್ಟು ಹೊರಗಡೆ ಸುಭಿಕ್ಷವಾಗಿ ಬೆಳೆ ಬಂದಿರುವ ಕಡೆಯಿಂದ ಆಹಾರಧಾನ್ಯಗಳನ್ನು ತಂದು ಸಹಕಾರ ಸಂಘಗಳ ಮೂಲಕ, ನ್ಯಾಯಬೆಲೆ ಅಂಗಡಿಗಳ ಮೂಲಕ ಜನಗಳಿಗೆ ಸಾಕಷ್ಟು ಆಹಾರವನ್ನು ಒದಗಿಸತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಈಗ ಸಮಗ್ರವಾಗಿ ಕ್ಷಾಮ ತಲೆದೋರಿರುವಾಗ ಸರ್ಕಾರ ನಿರ್ವಹಿಸುವುದು ಬಹಳ ಕಷ್ಟವಾಗುತ್ತದೆ. ಮೊನ್ನೆ ಮಾನ್ಯ ಬಂಗಾರಪ್ಪನವರು ಅವರ ಭಾಷಣದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಮುಖ್ಯ ಮಂತ್ರಿಗಳು ಬರದ ಬಗ್ಗೆ ಹೇಳುತ್ತಾ, ದೇವರೇ ಕಾಪಾಡಬೇಕೆಂದು ಹೇಳಿದ್ದಾರೆ ಎಂಬುದಾಗಿ ಹೇಳಿದರು. ಸಾಮಾನ್ಯವಾಗಿ ಭಾರತೀಯರಲ್ಲಿ ದೇವರ ಬಗ್ಗೆ ನಂಬಿಕೆ ಇದೆ. ಕಷ್ಟ ಬಂದಾಗ ಹಿರಿಯರು ದೇವರನ್ನು ನೆನೆಸಿ ಕೊಳ್ಳುತ್ತಾರೆ. ಮೊಮ್ಮಗನಿಗೆ ಜ್ವರ ಬಂದಾಗ ೭೦ ವರ್ಷದ ಮುದುಕಿ ನೀರವಾಗಿ ಆಸ್ಪತ್ರೆಗೆ ಹೋಗುವುದಿಲ್ಲ. ಮಾರಮ್ಮ, ಕಾಳಮ್ಮ, ರಂಗಮ್ಮ, ಶಾರದಮ್ಮ, ಕೆಂಚಮ್ಮ ಮುಂತಾದ ದೇವರಿಗೆ ಕೈಮುಗಿದು ತಾಯಿ, ಮೊಮ್ಮಗನಿಗೆ ಬಂದಿರುವ ಜ್ವರ ಹೋಗಲಿ, ನಿನಗೆ ೧೦೦ ಬಾಳಿಹಣ್ಣು ಕೊಟ್ಟು ರಸಾಯನ ಮಾಡಿಸುತ್ತೇನೆ ಎಂದು ಹೇಳಿಕೊಳ್ಳುತ್ತಾರೆ. ಇದು ವಾಡಿಕೆ. ಅದೇರೀತಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ನಿಜ. ೧೯ ಜಿಲ್ಲೆಗಳಲ್ಲಿ ಕ್ಷಾಮ ತಲೆದೋರಿದೆ, ಇದರಿಂದ ಪಾರಾಗ ಬೇಕಾದರೆ ಭಗವಂತ ಕಾಪಾಡಬೇಕು ಎಂದರು ಹೇಳಿದ್ದು ನಿಜ ಇವತ್ತು ಭಗವಂತನನ್ನು ನಾವು ನಂಬಿದ್ದೇವೆ. ಈ ದೇಶದಲ್ಲಿ ಕಷ್ಟ ಬಂದಾಗ ದೇವರನ್ನು ನೆನೆಯತಕ್ಕದ್ದು ವಾಡಿಕೆ. ಆದರ ಬಗ್ಗೆ ವ್ಯಾಖ್ಯಾನ ಮಾಡುವುದು ಸರಿಯಲ್ಲ. ಇನ್ನು ಈ ಘನ ಸರ್ಕಾರ ಬರುವುದಕ್ಕೆ ಮುಂಚಿತವಾಗಿ ಕೆಲವು ರೈತರು ವ್ಯಾಖ್ಯಾನ ಮಾಡುತ್ತಾ ಹೇಳಿದರು, ನಾನೂ ಕೂಡ ರೈತನ ಮಗ. ಬೇಸಾಯ ಮಾಡಿ ರೂಢಿ ಇದೆ. ಕೃಷಿಕ ಜೀವನದಲ್ಲಿ ಬೆಳೆದು ಬಂದಿದ್ದೇನೆ. ಕಾಡಿನಿಂದ ಸೌದೆ ತರತಕ್ಕ ಅನುಭವದಿಂದ ಹಿಡಿದು ಬೇಸಾಯ ಮಾಡತಕ್ಕವರೆಗೆ ಅನುಭವ ಇದೆ, ಮೇಣ ಹಿಡಿದು ಅನುಭವ ಇದೆ. ಸಾಮಾನ್ಯವಾಗಿ ಈ ವಿಷಯವನ್ನು ಅವರು ಪ್ರಸ್ತಾಪ ಮಾಡಿದರು. ೧೯೮೩ರಲ್ಲಿ ಈ ಸರ್ಕಾರ ಬರಬೇಕಾದರೆ ರೈತರ ಬೆಂಬಲ ಪಡೆದುಕೊಂಡಿದ್ದು, ಸಹಕಾರ ಪಡೆದುಕೊಂಡಿದ್ದು ನಿಜ. ಆ ರೈತರ ಸಹಕಾರದಿಂದಲೂ ಬಂದಿದ್ದೇವೆ ಎಂದು ಹೇಳಿದರೂ ತಪ್ಪಾಗಲಾರದು. ೧೯೮೩ರಲ್ಲಿ ಬಂದಂಥ ರಾಜ್ಯ ಸರ್ಕಾರ ರೈತರ

ಬೇಡಿಕೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಬಗೆಹರಿಸಲು ಪ್ರಯತ್ನಿಸಿತು. ರೈತರ ಬೇಡಿಕೆಗಳು, ಸಮಸ್ಯೆಗಳು ೩೫ ವರ್ಷಗಳಿಂದ ಇದ್ದರೂ ಕೂಡ ಯಾವ ಸರ್ಕಾರವೂ ಮಾಡದೇ ಇರಕಕ್ಕಂಥ ಪರಿಣಾಮಕಾರಿಯಾದ ಕೆಲಸವನ್ನು ರೈತರಿಗೋಸ್ಕರ, ಕೃಷಿಕರಿಗೋಸ್ಕರ ಮಾಡಿತು. ೮೦ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿತು. ಹಿಂದಿನಿಂದಲೂ, ರಾಮಂರಾವಣರ ಕಾಲದಿಂದಲೂ ೧೨ ಪರ್ಸೆಂಟ್ ಬಡ್ಡಿ ಇತ್ತು. ೧೯೮೩ ರಿಂದೀಚೆಗೆ ೭ ಪರ್ಸೆಂಟ್ ಬಡ್ಡಿಯಂತೆ ಸಹಕಾರ ಸಂಘಗಳ ಮೂಲಕ ರೈತರಿಗೆ ಒದಗಿಸತಕ್ಕ ಪ್ರಮಾಣಿಕ ಕೆಲಸವನ್ನು ಯಾವ ಸರ್ಕಾರ ಮಾಡಿತು ಎನ್ನುವುದನ್ನು ಯಾರೂ ಭಾಷಣದಲ್ಲಿ ಹೇಳಲಿಲ್ಲ ಏಕೆ ಎಂದು ಕೇಳುವುದಕ್ಕೆ ನಾನು ಸಿದ್ದನಿದ್ದೇನೆ.

**ಶ್ರೀ ರಾಜವರ್ಧನ.**—ವಿರೋಧ ಪಕ್ಷದಲ್ಲಿ ಕೇವಲ ೩–೪ ಇದ್ದಾರೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ನಾವು ಯಾರಿಗೆ ಮಾತನಾಡುವುದು ?

† ಶ್ರೀ ಬಿ. ಸ್ವಾಮಿರಾವ್.—ನೀವು ಸಲಹೆ ಕೊಡುವುದು ಆಡಳಿತ ಪಕ್ಷಕ್ಕೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—೧೯೮೫ರ ಚುನಾವಣೆಯಲ್ಲಿ ಜನತಾ ಸರ್ಕಾರಕ್ಕೆ ರೈತ ಪ್ರತಿನಿಧಿಗಳು ಸಹಕಾರ ಮಾಡಲಿಲ್ಲ. ರೈತ ಸಂಘದವರು ಜನತಾ ಪಕ್ಷಕ್ಕೆ ವಿರೋಧವಾಗಿದ್ದರು ಎನ್ನುವುದನ್ನು ಮರೆಯಬಾರದು. ೧೯೮೩ರಲ್ಲಿ ರೈತರ ಬೆಂಬಲದಿಂದ ಸರ್ಕಾರ ಅಧಿಕಾರಕ್ಕೆ ಬಂತು. ೧೯೮೫ರಲ್ಲಿ ರೈತರ ಲೀಡರ್ಸ್ ಮಾತ್ರ ನಮಗೆ ಎಗೆನಸ್ಟಾದರು. ರೈತರು ನಮಗೆ ವಿರೋಧ ಮಾಡಲಿಲ್ಲ. ೧೯೮೫ರ ಸರ್ಕಾರ ಗ್ರಹಚಾರವಶಾತ್ ಅಲ್ಪಕಾಲದಲ್ಲೇ ಹೋಯಿತು. ಸಾಕಷ್ಟು ಸೇವೆಯನ್ನು ರಾಜ್ಯಕ್ಕೆ ಮಾಡುವುದಕ್ಕೆ ಆಗಲಿಲ್ಲ. ೨೩ ತಿಂಗಳಲ್ಲಿ ಕೆಲಸ ಮಾಡಿದ್ದು ಜನಗಳ ಮನಸ್ಸಿಗೆ ಹಿಡಿಸಿದೆ, ಎಂತ್ಹೊಮ್ಮೆ ಆಯ್ಕೆ ಮಾಡಿ, ನಾವು ಇಂತಹ ಕೆಲಸವನ್ನು ಮಾಡುತ್ತೇವೆ ಎಂದು ನಮ್ಮ ಜನತಾ ಪಕ್ಷದ ಮ್ಯಾನಿಫೆಸ್ಟೋ ನಲ್ಲಿ ಚುನಾವಣೆಗೆ ಮುನ್ನ ಕೆಲವು ವಿಷಯಗಳನ್ನು ಪ್ರಕಟ ಮಾಡಿದೆವು. ಆ ವಿಷಯಗಳನ್ನು ಬಾಚೂ ತಪ್ಪದೆ ಹಂತಹಂತವಾಗಿ ಈ ಸರ್ಕಾರ ಪಾಲನೆ ಮಾಡಿಕೊಂಡು ಬಂದಿದೆ ಎನ್ನುವ ಮಾತನ್ನು ಆ ಭಾಗದಲ್ಲಿ ಕುಳಿತಿರತಕ್ಕ ಕೆಲವರು ಒಪ್ಪತಕ್ಕ ವಿಚಾರ. ಮಾನ್ಯ ಖಾರ್ಗೆಯವರು ಒಂದು ಪುಸ್ತಕ ತೆಗೆದು ಸೀರೆ ನೋಡಿ, ಪಂಚೆ ನೋಡಿ, ಕುಪ್ಪಸ ನೋಡಿ ಎಂದು ಹೇಳುತ್ತಿದ್ದರು. ಕುಪ್ಪಸ ತೊಟ್ಟಿರುವವರಿಗೆ ಅದರ ಅನುಭವ ಗೊತ್ತಾಗುತ್ತದೆಯೇ ಹೊರತು ತೊಡದೇ ಇರುವವರಿಗೆ ಗೊತ್ತಾಗವುದಿಲ್ಲ. ರಾಜ್ಯ ಸರ್ಕಾರ ೧೯ ಜಿಲ್ಲೆಗಳಲ್ಲಿ ಆಚ್ಚು ಹಾಕಿಸಿ ಬಟ್ಟೆಗಳನ್ನು ನೇಯ್ಗೆ ಮಾಡಿ ಸಕಾರದಲ್ಲಿ ಕೊಡಲಿಕ್ಕೆ ಆಗಲಿಲ್ಲ, ಹಂತಹಂತವಾಗಿ ಇದನ್ನು ಕೊಟ್ಟುಕೊಂಡು ಬಂದಿದ್ದೇವೆ. ಪರಿಪೂರ್ಣವಾಗಿ ನಮ್ಮ ಕಾಲಾವಧಿಯಲ್ಲಿ ಹೇಳಿದ ಮಾತಿನಂತೆ ವರ್ಷಕ್ಕೆ ಒಂದು ಕುಟುಂಬಕ್ಕೆ ಅಂದರೆ ಒಂದು ಹೆಂಗಸಿಗೆ ಒಂದು ಜೊತೆ ಸೀರೆ ಕುಪ್ಪಸ, ಒಬ್ಬ ಗಂಡಸಿಗೆ ಒಂದು ಜೊತೆ ಪಂಚೆ, ಬಟ್ಟೆ ಕೊಡತಕ್ಕದ್ದು ಎಲ್ಲರೂ ಒಪ್ಪತಕ್ಕ ವಿಚಾರ.

(ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ಅವರು ಅಧ್ಯಕ್ಷ ಪೀಠದಲ್ಲಿದ್ದರು)

ಜನತಾ ಸರ್ಕಾರ ಕೊಡತಕ್ಕ ಬಟ್ಟೆಗಳ ಮಾದರಿಯನ್ನು ಆಚ್ಚು ಹಾಕಿಸಿ, ಸದಸ್ಯರುಗಳಿಗೆ ಕೊಟ್ಟಿದೆ ತಾವು ಕೂಡ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಹಶೀಲ್ದಾರರವರು, ಅಸಿಸ್ಟೆಂಟ್ ಕಮೀಷನರುಗಳ ಸಮ್ಮುಖದಲ್ಲಿ ಸಹಕಾರ ಸಂಘಗಳ ಮೂಲಕ, ನ್ಯಾಯಬೆಲೆ ಅಂಗಡಿಗಳ ಮೂಲಕ ಸರ್ಕಾರದವರಂ ಕೊಟ್ಟಂಥ ಸೀರೆ, ಪಂಚೆ ಕಾಬುಸಗಳನ್ನು ಕೈ ಎತ್ತಿ ಕೊಟ್ಟಿದ್ದೀರಿ ಎಂದು ನಾನು ಭಾವಿಸುತ್ತೇನೆ, ತಮ್ಮ ಅಧ್ಯಕ್ಷತೆಯಲ್ಲಿಯೇ ಕೊಟ್ಟಿದ್ದೀರಿ.

ಶ್ರೀ ಯು. ಭೂಪತಿ.—ಸ್ವಾಮಿ, ಏತಕ್ಕೆ ವಿತರಣೆ ಮಾಡುತ್ತೇವೆ ಅಂದರೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಸರ್ಕಾರದಲ್ಲಿರುವಾಗ ಜನತೆಯ ಕಾರ್ಯಕ್ರಮಗಳಿಗೆ ಅನಿವಾರ್ಯವಾಗಿ ಹೋಗಲೇಬೇಕಾಗಿ ಬರುತ್ತದೆ.

ಶ್ರೀ ಎಸ್. ಆರ್. ಲಕ್ಷ್ಮಯ. —ಸ್ವಾಮಿ, ಮೊನ್ನೆ ನಮ್ಮ ಊರಿನಲ್ಲಿ ಒಂದು ಸಂತೆ ನಡೆಯಿತ್ತು. ಆ ಸಂತೆಗೆ ಸುಮಾರು ೫ ರಿಂದ ೬ ಸಾವಿರದವರೆಗೆ ಹೆಂಗಸರು ಗಂಡಸರು ಬರುತ್ತಾರೆ. ಒಬ್ಬರು ಬಟ್ಟೆ ವ್ಯಾಪಾರಿಯೊಬ್ಬರು ಹೇಳಿದರು. ಸ್ವಾಮಿ, ನಾವು ೩೮–೪೦ ವರ್ಷಗಳಿಂದಲೂ ಬಟ್ಟೆ, ಸೀರೆ ವ್ಯಾಪಾರ ಮಾಡಿಕೊಂಡು ಜೀವನ ಮಾಡುತ್ತಿದ್ದೆವು, ಅದರಿಂದಲೇ ಬದುಕಿದ್ದೆವು. ಪ್ರತಿ ಸಂತೆಯಲ್ಲಿಯೂ ಕೂಡ ಸಾಕಷ್ಟು ವ್ಯಾಪಾರ ನಮಗೆ ಆಗುತ್ತಿತ್ತು, ಈಗ ಇಲ್ಲಿ ಜಾತ್ರೆ ನಡೆಯುವಂಥ ಸಂದರ್ಭದಲ್ಲಿಯೂ ಕೂಡ

ಬಂದು ಸಾವಿರ ರೂಪಾಯಿ ಕೂಡ ವ್ಯಾಪಾರ ಆಗಿಲ್ಲವೆಂದು ಹೇಳಿದರು. ರೇಷ್ಮೆ ಸೀರೆ ಮತ್ತು ಶೈಲಾನ್ ಸೀರೆಗಳನ್ನು ಉಡತಕ್ಕವರು ಶ್ರೀಮಂತವರ್ಗದವರು ಮಾತ್ರ, ಜನತಾ ಸರ್ಕಾರ ಕೊಡತಕ್ಕ ಸೀರೆ ಮತ್ತು ಬಟ್ಟೆಗಳು ಚೆನ್ನಾಗಿವೆಯೆಂದು ನಮ್ಮ ಹೆಣ್ಣುಮಕ್ಕಳು ಹೇಳುವುದನ್ನು ನಾವು ಕೇಳಿದ್ದೇವೆ. ಮಾನ್ಯ ವಿದ್ಯಾಮಂತ್ರಿಗಳು ಶಾಲಾ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಕೊಡುವಂಥ ವಿಷಯವನ್ನು ಹೇಳಿದರು. ಹಂಚಿಕೆಯಲ್ಲಿ ಲೋಪ ದೋಷಗಳಾಗಿರಬಹುದು. ನಾವೇನೂ ಸರ್ವಜ್ಞರಲ್ಲ, ನಡೆಯುವಂಥ ವ್ಯಕ್ತಿ ಎಡವುತ್ತಾನೆ, ಸರ್ಕಾರದ ಪತಿಯಿಂದ ಲೋಪದೋಷಗಳು ನಡೆದರೆ, ಅದನ್ನು ಸರಿಪಡಿಸತಕ್ಕ ಶಕ್ತಿ ನಿಮಗೆ ಇದೆ, ಅದನ್ನು ಬಿಟ್ಟು ಬರೀ ವ್ಯಾಖ್ಯಾನ ಮಾಡಿ, ನಾಟಕದ ರೂಪದಲ್ಲಿ ಮಾಡಿದ್ದೆಲ್ಲಾ ಚೆನ್ನಾಗಿಲ್ಲವೆಂದು ಹೇಳುವುದು ಸೂಕ್ತವೆ ಎಂದು ನಾನು ಕೇಳುತ್ತೇನೆ, ಮಾದುವೆ ಆಗುವಾಗ ಹೆಣ್ಣು ಚೆನ್ನಾಗಿರುತ್ತದೆ. ಮದುವೆಯಾದ ಮೇಲೆ ಆಕೆ ಹೇಗೆ ಅಡಿಗೆ ಮಾಡಿಟ್ಟರೂ ಅದು ರುಚಿಯಿರುವುದಿಲ್ಲ, ''ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತು'' ಎನ್ನುವಂತೆ ಸರ್ಕಾರವನ್ನು ಬೈಯುವುದಕ್ಕೆ ಒಂದುನೆಪ ಸಿಕ್ಕಿತು ಎಂದು ಹೇಳುತ್ತಿದ್ದಾರೆ. ಇವತ್ತು ಜನತಾ ಸರ್ಕಾರ ಸಹಕಾರ ಸಂಘಗಳ ಮೂಲಕ, ನ್ಯಾಯ ಬೆಲೆ ಅಂಗಡಿ ಮೂಲಕ ೨೦೦-೩೦೦ ಕ್ವಿಂಟಾಲ್ ಅಕ್ಕಿಯನ್ನು ವಿತರಣೆ ಮಾಡುವಂಥ ವ್ಯವಸ್ಥೆ ಮಾಡಿದೆ. ಹಸಿರು ಕಾರ್ಡುಗಳ ಮೂಲಕ ಹಂಚತಕ್ಕ ಪ್ರಯತ್ನವನ್ನು ಮಾತಲಾಗಿದೆ. ಇವತ್ತು ಅಕ್ಕಿಯ ಬೆಲೆ ೪-೫ ರೂಪಾಯಿಗಳಿಗೆ ಏರಿದ್ದರೂ, ಎರಡು ರೂಪಾಯಿಗೆ ಕೆ. ಜಿ. ಅಕ್ಕಿಯನ್ನು ಕೊಡತಕ್ಕ ಪ್ರಯತ್ನ ಮಾಡಿ ರಾಜ್ಯ ಸರ್ಕಾರ ಕೊಟ್ಟ ಮಾತನ್ನು ಉಳಿಸಿ ಕೊಂಡಿದೆ. ಅಲ್ಲದೇ, ಶ್ರೀಮಂತರ ವರ್ಗಕ್ಕೂ ಸರ್ಕಾರೀ ನೌಕರರಿಗೂ ಸುಲಭದರದಲ್ಲಿ ಅಕ್ಕಿಯನ್ನು ಕೊಡತಕ್ಕ ಕಾರ್ಯಕ್ರಮವನ್ನು ವ್ಯಾಪಕವಾಗಿ ಹಾಕಿಕೊಂಡಿದೆ. ಹಿಂದಿನ ಸರ್ಕಾರಗಳಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ, ಸಹಕಾರಿ ಸಂಘಗಳಿಗೆ ೪ ಚೀಲ ಸಕ್ಕರೆ, ಮೂರು ಚೀಲ ಅಕ್ಕಿ ಕೊಡುತ್ತಿದ್ದರೂ, ಅದು ಕೂಡ ಬಡವರಿಗೆ ಸಿಗುತ್ತಿರಲಿಲ್ಲ, ರೈತರಿಗೂ ಸಿಗುತ್ತಿರಲಿಲ್ಲ, ಜನತಾ ಸರ್ಕಾರ ರೆವಿನ್ಯೂ ಅಧಿಕಾರಿಗಳನ್ನು ಮನೆಮನೆಗೂ ಕಳುಹಿಸಿ, ೩೫೦೦ ರೂಪಾಯಿಗಳಿಗಿಂತ ಕಡಿಮೆ ವರಮಾನ ಇರತಕ್ಕ ಕುಟುಂಬಗಳನ್ನು ಗುರುತಿಸಿ, ಹಸಿರು ಕಾರ್ಡುಗಳ ಮೂಲಕ ಅಕ್ಕಿಯನ್ನು ಕೊಡತಕ್ಕ ವ್ಯವಸ್ಥೆ ಮಾಡಿದೆ. ಆಗಿದ್ದಂಥ ಲೋಪದೋಷಗಳನ್ನು ಸರಿಪಡಿಸಿ ಪ್ರತಿ ತಾಲ್ಲೂಕಿನಲ್ಲಿಯೂ ೨೫ ರಿಂದ ೩೦ ಸಾವಿರ ಕುಟುಂಬಗಳನ್ನು ಗುರುತಿಸಿ, ಸರಕಾರ ಸಂಘಗಳ ಮೂಲಕ ಹತ್ತು ಕೆ. ಜಿ. ಅಕ್ಕಿಯನ್ನು ಕೊಡತಕ್ಕ ಕಾರ್ಯಕ್ರಮ ಜಾರಿಗೆ ತಂದಿರುವುದನ್ನು ತಾವು ಗಳಿಲ್ಲರೂ ಅಭಿನಂದಿಸ ಬೇಕಾಗಿದೆ. ಮಾನ್ಯ ಬಂಗಾರಪ್ಪನವರು ರಾಜ್ಯದ ಹದಿನೆಂಟು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ ಸಂದರ್ಭದಲ್ಲಿ ಯಾವುದೇ ಜಾಗದ ರಸ್ತೆಯಲ್ಲಿಯೂ ಹಿಂಡು ಹಿಂಡಾಗಿ ದನಕರುಗಳು ಹೋಗುವುದನ್ನು ಕಂಡಿದ್ದೇನೆಂದೂ ಅವುಗಳೆಲ್ಲವೂ ಬೆಂಗಳೂರು ಕಸಾಯಿ ಖಾನೆಗೆ ಬರುತ್ತವೆಂದು ತಿಳಿಸಿದರು. ಸ್ವಾಮಿ, ನಮಗೆಲ್ಲಾ ಗೊತ್ತಿರದಂತೆ ದನಕರುಗಳು ರಸ್ತೆಯ ಮೇಲೆ ಹೋಗದೇ ಎಲ್ಲಿ ಹೋಗಬೇಕು ? ತುಮಕೂರು ಬೆಂಗಳೂರು ರಸ್ತೆಯಲ್ಲಿ ನಾವು ಕಂಡಂತೆ ಪ್ರತಿ ದಿನವೂ ತಂಡತಂಡವಾಗಿ, ಗುಂಪು ಗುಂಪಾಗಿ ದನಗಳನ್ನು ಹೊಡೆದುಕೊಂಡು ಬರುತ್ತಿರುವುದನ್ನು ನೋಡಿರುತ್ತಿದ್ದೇವೆ, ಅವುಗಳು ಕಸಾಯಿ ಖಾನೆಗೆ ಬರುತ್ತವೆನ್ನುವುದು ಎಲ್ಲರಿಗೂ ತಿಳಿದಂಥ ವಿಚಾರವೇ ಆಗಿದೆ. ನಾನು ಇವತ್ತು ಸವಾಲು ಹಾಕುತ್ತೇನೆ, ರೈತ ತನ್ನ ಜೀವನಕ್ಕೆ, ಅವಶ್ಯಕವಾದಂಥ ದನಗಳನ್ನು ಯಾವತ್ತು ಕಸಾಯಿ ಖಾನೆಗೆ ಕೊಡುವುದಕ್ಕೆ ಹೋಗುವುದಿಲ್ಲ, ಹೇಗಾದರೂ ಮಾಡಿ ಅವುಗಳ ಸಂರಕ್ಷಣೆ ಮಾಡುತ್ತಾನೆ. ಅವನು ಎಷ್ಟೇ ಸಂಕಷ್ಟದಲ್ಲಿದ್ದರೂ ಕೂಡ ಅವುಗಳ ಹೊಣೆಗಾರಿಕೆಯನ್ನು ಆತ ಹೊರುತ್ತಾನೆ. ಮುದಿ ಎತ್ತುಗಳನ್ನು, ಹಸುಗಳನ್ನು ಮಾರಾಟ ಮಾಡುತ್ತಾರೆ. ರಸ್ತೆಗಳ ಮೇಲೆ ಗುಂಪು ಗುಂಪಾಗಿ ದನಗಳನ್ನು ಹೊಡೆದು ಕೊಂಡು ಬಂದು ಕಸಾಯಿ ಖಾನೆಗೆ ಮಾರಾಟ ಮಾಡಿದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಕಾನೂನು ಮಾಡಿ, ಕಂರಿ, ಕೋಳಿ ತಿನ್ನುವ ಜನ ಇದ್ದಹಾಗೆ ದನಗಳನ್ನು ತಿನ್ನುವವರಿದ್ದಾರೆ, ಅದರ ಬಗ್ಗೆ ಬರೀ ವ್ಯಾಖ್ಯಾನ ಮಾಡುವುದಲ್ಲ, ಚುನಾವಣೆ ಬಂದಾಗ ನಾವು ನೀವು ಹೈರಾವಣ, ಮೈರಾವಣ ಮಾಡೋಣ, ಚುನಾಯಿತರಾಗಿ ಅಧಿಕಾರವನ್ನು ಹಿಡಿದು ಜನಗಳ ಅಭೀಷ್ಟವನ್ನು ನೆರವೇರಿಸದೆ ಹೋದರೆ, ಜನ ನಮ್ಮನ್ನು ಮನೆಗೆ ಕಳುಹಿಸುತ್ತಾರೆ ಅದರ ಬಗ್ಗೆ ನಮ್ಮ ವಿರೋಧವೇನೂ ಇಲ್ಲ, ನಾವು ಆರಿಸಿದಂಥ ಕ್ಷೇತ್ರಕ್ಕೆ ನಮ್ಮ ಕೈಲಾದ ಕೆಲಸವನ್ನು ಪ್ರಾಮಾಣಿಕವಾಗಿ ಮಾಡದೇ ಹೋದರೆ, ಜನರ ವಿಶ್ವಾಸವನ್ನು ಗಳಿಸದೇ ಹೋದರೆ ಅದರ ಫಲವನ್ನು ಅನುಭವಿಸ ಬೇಕಾಗುತ್ತದೆ. ಆದರೆ, ತಾವು ಅಷ್ಟೊಂದು ವಿಕೋಪಕ್ಕೆ ಹೋಗಬಾರದೆಂದು ಹೇಳುತ್ತೇನೆ.

ಇವತ್ತು ಸರ್ಕಾರ ಬಹಳ ಕಷ್ಟಕರವಾದ ಸ್ಥಿತಿಯಲ್ಲಿದೆ. ಆ ಕಡೆ ಇರತಕ್ಕವರು ಅರಿತವರು ನುರಿತವರು ಆದಂಥ ಮಾನ್ಯ ಕೆ. ಎಚ್. ಪಾಟೀಲ್‌ರವರು, ಪೊಯಿಲಿಯವರು ,ಮತ್ತಿತರರು ಹಾಗೆಲ್ಲಾ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಖರ್ಗೆಯವರು ಮಾತ್ರ ಸ್ವಲ್ಪ ಕೂಗಾಡುತ್ತಾರೆ. ಸರ್ಕಾರ ಕಷ್ಟಕಾಲದಲ್ಲಿರುವಾಗ ನಾವು ನೀವು ಎಲ್ಲಾ ಒಂದಾಗಿ ಕೆಲಸ ಮಾಡೋಣ. ಲೋಕಸಭಾ ಚುನಾವಣೆಯಲ್ಲಿ ನಾವು ಕಾರಂಗಳಿಗೆ ಬಾವುಟ ಕಟ್ಟಿಕೊಂಡು ಎಷ್ಟೇ ಓಡಿಸಿದರೂ, ಎಷ್ಟೇ ಭಾಷಣ ಮಾಡಿದರೂ ನಮ್ಮ ಪಕ್ಷದ ಮತಿಯಿಂದ ನಾಲ್ಕು ಜನರನ್ನು ಮಾತ್ರ ಆರಿಸಿ ದೆಹಲಿಗೆ ಕಳುಹಿಸಲು ಸಾಧ್ಯವಾಯಿತು. ರಾಜ್ಯದ ಜನತೆ ನಿಮ್ಮ ಪಕ್ಷದ ೨೪ ಜನರನ್ನು ಆರಿಸಿ ದೆಹಲಿಗೆ ಕಳುಹಿಸಿದ್ದಾರೆ, ನಮ್ಮ ರಾಜ್ಯದ ಜನತೆ ಲೋಕಸಭಾ ಚುನಾವಣೆಯಲ್ಲಿ ನಿಮ್ಮ ಪಕ್ಷದವರು ಜಾಸ್ತಿ ಜನ ಇರಲಿ, ಜನತಾ ಪಕ್ಷದವರು ೪ ಜನ ಮಾತ್ರ ಸಾಕು ಎಂದು ಅದಷ್ಟು ಕಡಿಮೆ ಜನರನ್ನು ಆರಿಸಿದ್ದಾರೆ. ಲೋಕಸಭೆಯಲ್ಲಿ ಕಾಂಗ್ರೆಸ್‌ನವರು ಇರಲಿಯೆಂದೇ ನಿಮ್ಮವರನ್ನೆ ಆರಿಸಿ ಕಳುಹಿಸಿದ್ದಾರೆ, ಅದನ್ನು ಒಪ್ಪಿಬೇಕಾಗುತ್ತದೆ. ನಿಮ್ಮ ಪಕ್ಷದವರನ್ನೂ ಆರಿಸಿ ಕಳುಹಿಸಿದಂತಹ ಜನ ಕೇವಲ ೬೫ ದಿವಸಗಳಲ್ಲಿ ರಾಜ್ಯದಲ್ಲಿ ನಮ್ಮ ಪಕ್ಷದ ಪತಿಯಿಂದ ೧೫೯ ಜನರನ್ನು ಆರಿಸಿ ಕಳುಹಿಸಿದ್ದಾರೆ. ನಮ್ಮ ರಾಜ್ಯದ ಜನ ದಡ್ಡರಲ್ಲ. ರಾಜ್ಯ ಸರ್ಕಾರ ಒಳ್ಳೆಯ ಕೆಲಸ ಮಾಡಿದೆಯೆಂದು ಬಹಳ ವಿವೇಚನೆಯಿಂದ ಜನತಾ ಪಾರ್ಟಿಯ ಸದಸ್ಯರನ್ನು ಆರಿಸಿ ಕಳುಹಿಸಿದ್ದಾರೆ ಕಾಂಗ್ರೆಸ್‌ನವರಿಗಿಂತ ಜನತಾ ಪಾರ್ಟಿಯವರು ಒಳ್ಳೆಯ ಕೆಲಸಮಾಡಿದ್ದಾರೆಂದು ನಾಡಿನ ಜನ ಒಪ್ಪಿಕೊಂಡಿದ್ದಾರೆ. ಮುಗ್ಧ ಮಕ್ಕಳು ಸಹ ಒಪ್ಪಿಕೊಂಡಿದ್ದಾರೆ. ಅದು ಏನೇ ಇರಲಿ. ನಾನೂ ಕೂಡ ೧೨ ವರ್ಷಗಳ ಕಾಲ ಉಪಾಧ್ಯಾಯನಾಗಿ ಕೆಲಸ ಮಾಡಿ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ಈಗ ಶಾಸಕನಾಗಿ ಆರಿಸಿ ಬಂದಿದ್ದೇನೆ.

ಶ್ರೀ ಯು. ಭೂಪತಿ.—ಅದಕ್ಕೆ ತಾವು ಈಗ ಪಾಠ ಹೇಳುತ್ತಿದ್ದೀರಿ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಇವತ್ತು ಯಾವುದೇ ಶಾಲೆಗೆ ಹೋದರೂ ೨೦೦ ಮಕ್ಕಳು ಇರತಕ್ಕ ಶಾಲೆಯಲ್ಲಿ ಎಷ್ಟು ಜನ ಉಪಾಧ್ಯಾಯರು ಇದ್ದಾರೆ ? ೪೦೦ ಮಕ್ಕಳು ಇರತಕ್ಕ ಶಾಲೆಯಲ್ಲಿ ಮೂರು ಜನ ಉಪಾಧ್ಯಾಯರು ಇದ್ದಾರೆ. ಅದನ್ನು ಸರಿಪಡಿಸಲಿಕ್ಕೆ ಮೊನ್ನೆ ಜಿಲ್ಲಾಮಟ್ಟದ ನೇಮಕಾತಿ ಸಮಿತಿಯನ್ನು ಮಾಡಿ ಉಪಾಧ್ಯಾಯರುಗಳನ್ನು ಆಯ್ಕೆ ಮಾಡಿದರೂ ಖಾಲಿಯಿರತಕ್ಕ ಜಾಗಗಳನ್ನು ಭರ್ತಿ ಮಾಡಲಿಕ್ಕೆ ಆಗಿಲ್ಲ. ಇನ್ನೂ ೨೫ ಸಾವಿರ ಉಪಾಧ್ಯಾಯರುಗಳು ಬೇಕೆಂದು ಹೇಳುತ್ತಿದ್ದಾರೆ. ಹಿಂದ ೧೯೮೩ನೇ ಇಸವಿಯಲ್ಲಿ ಏನು ಮಾಡಿದರು ಅಂದರೆ, ಪಶುಸಂಗೋಪನಾ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಒಂದು ದನದ ಆಸ್ಪತ್ರೆಯನ್ನು ಮಂಜೂರು ಮಾಡಿದರು. ಭಾಷಣ ಮಾಡಿದ್ದು ಮಾಡಿದ್ದೆ. ಚುನಾವಣೆ ಬಂತು, ಏನು ಆಗಬೇಕೋ ಅದು ಆಯಿತು. ೧೯೮೨ರಲ್ಲಿ ದನದ ಆಸ್ಪತ್ರೆಯನ್ನು ಮಂಜೂರು ಮಾಡಿದ್ದರೂ ೧೯೮೫ನೇ ಇಸವಿ ಬಂದರೂ ಅದಕ್ಕೆ ಜವಾನ ಇಲ್ಲ, ವೈದ್ಯರು ಇಲ್ಲ, ಕಾಂಪೌಂಡರು ಇಲ್ಲ, ಔಷಧಿ ಇಲ್ಲ ಆಸ್ಪತ್ರೆನೂ ಇಲ್ಲ. ಸಂಬಂಧಪಟ್ಟ ಇಲಾಖೆಯ ಡೈರೆಕ್ಟರ್ ಹೇಳಿದರು, ಸಿಂದಗೇರಿಗೆ ಆಸ್ಪತ್ರೆ ಮಂಜೂರು ಆಗಿದೆ. ೫೦ ಸಾವಿರ ರೂಪಾಯಿ ಖರ್ಚುಮಾಡಿ ಎನ್‌ಆರ್‌ಇಪಿ ಯೋಜನೆಯಿಂದ ಕಟ್ಟಡ ಕಟ್ಟಲಾಗಿದೆ. ಅಧಿಕೃತವಾಗಿ ಆ ಆಸ್ಪತ್ರೆಗೆ ಮಂಜೂರಾತಿ ಇಲ್ಲವೆಂದು ಹೇಳಿದರು. ೧೯೮೩ ರಿಂದ ಈಚೆಗೆ ೨೦೦ ದನದ ಆಸ್ಪತ್ರೆಗಳನ್ನು ಆರಂಭಮಾಡಿ ಅವುಗಳಿಗೆ ಇದುವರೆಗೆ ಡಾಕ್ಟರುಗಳನ್ನು ಕಾಂಪೌಂಡರುಗಳನ್ನು ಭರ್ತಿ ಮಾಡುವುದಕ್ಕೆ ಆಗಿಲ್ಲ. ೧೯೮೫—೮೬ರಲ್ಲಿ ೧೫೦೦ ಕಾಂಪೌಂಡರ್‌ಗಳನ್ನು ಆಯ್ಕೆಮಾಡಿ ಅವರಿಗೆಲ್ಲ ತರಬೇತಿಯನ್ನು ಕೊಟ್ಟು ಮೊನ್ನೆ ಸಂದರ್ಶನಕ್ಕೆ ಕರೆದಿದ್ದಾರೆ ೧೫೦೦ ಕಾಂಪೌಂಡರುಗಳನ್ನು ದನದ ಆಸ್ಪತ್ರೆಗಳಿಗೆ ನೇಮಕ ಮಾಡತಕ್ಕ ಕೆಲಸ ಮಾಡಿದ್ದೇವೆ. ವೈದ್ಯರುಗಳು ಎಲ್ಲೂ ಇಲ್ಲ, ವೈದ್ಯರುಗಳನ್ನು ಭರ್ತಿಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಈಗಾಗಲೇ ಸಾಕಷ್ಟು ವೈದ್ಯರುಗಳನ್ನು ನೇಮಕ ಮಾಡಲಾಗಿದೆ. ಸುಮಾರು ೪೦ ಸಾವಿರ ಹುದ್ದೆಗಳನ್ನು ವಿವಿಧ ಇಲಾಖೆಗಳಲ್ಲಿ ಭರ್ತಿಮಾಡಿರುವುದು ಎಲ್ಲರೂ ಒಪ್ಪತಕ್ಕ ವಿಚಾರ. ಪ್ರಕೃತಿಯ ವಿಕೋಪಕ್ಕೆ ಇಡೀ ರಾಜ್ಯ ತುತ್ತಾಗಿ ದನಗಳು ಕೂಡ ಇವತ್ತು ಕಷ್ಟದಲ್ಲಿವೆ. ನಾನು ಈ ಸದನದ ಮೂಲಕ ಎಲ್ಲಾ ಜಿಲ್ಲಾ ಮಂತ್ರಿಗಳನ್ನು ಕೋರುತ್ತೇನೆ, ತಾವುಗಳೆಲ್ಲಾ ಜಿಲ್ಲೆಯಲ್ಲಿ ವ್ಯಾಪಕವಾಗಿ ಸಂಚಾರ ಮಾಡಿ ತಮ್ಮ ಜವಾಬ್ದಾರಿಯನ್ನು ಅರಿತು ಒಳ್ಳೆಯ ಕೆಲಸ ಮಾಡಿ. ನಮ್ಮ ಜಿಲ್ಲೆಯ ಜಿಲ್ಲಾಮಂತ್ರಿಗಳಾದ ಮಾನ್ಯ ಗೋವಿಂದೇಗೌಡರು ಜಿಲ್ಲೆಯಲ್ಲಿ ಪ್ರವಾಸ ಮಾಡಿ, ಬರಪೀಡಿತ ಪ್ರದೇಶಗಳಲ್ಲಿ ಜನರನ್ನು ಸಂದರ್ಶಿಸಿ ಸಂಬಂಧಪಟ್ಟ ಶಾಸಕರನ್ನು ಕರೆಸಿ ಅವರ ಜೊತೆಯಲ್ಲಿ ಸಮಾಲೋಚನೆ

ಮಾಡಿ, ನಮ್ಮ ಜಿಲ್ಲೆಯಲ್ಲಿ ಇನ್ನು ಮುಂದೆ ಏನಾದರೂ ಕಷ್ಟ ಬಂದರೆ ಅದನ್ನು ಎದುರಿಸತಕ್ಕ ಕೆಲಸ ವನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ನಮ್ಮ ಜಿಲ್ಲಾಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಸರ್ಕಾರದಿಂದ ಹಣ ಖರ್ಚುಮಾಡಿ ಬೀರೂರು, ಅಜ್ಜಂಪುರ ಫಾರಂ, ಎಮ್ಮೆದೊಡ್ಡಿ ಫಾರಂಗಳಲ್ಲಿರತಕ್ಕ ಹುಲ್ಲನ್ನು ಸಂಗ್ರಹ ಮಾಡಿದ್ದಾರೆ. ವಾರ್ಷಿಕ ಆದಾಯ ೩೬೦೦ ರೂಪಾಯಿಗಳಿಗಿಂತ ಕಡಿಮೆ ಯಾರಿಗೆ ಇದೆ ಅಂತಹವರಿಗೆ ಹಸಿರು ಕಾರ್ಡ್ ಕೊಟ್ಟು ಅಕ್ಕಿಯನ್ನು ಕೊಡತಕ್ಕ ಕಾರ್ಯಕ್ರಮವನ್ನು ಹಾಕಿ ಕೊಂಡಿದೆ. ಅದೇರೀತಿ ರಾಸುಗಳಿಗೆ ಹುಲ್ಲನ್ನು ಒದಗಿಸುವಂತಹ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿರತಕ್ಕ ಎಲ್ಲಾ ವಿಷಯಗಳನ್ನು ನಾನು ಸಮರ್ಥಿಸುತ್ತಾ, ಒಳ್ಳೆಯ ಕೆಲಸ ಮಾಡತಕ್ಕ ಸರ್ಕಾರವನ್ನು ಅಭಿನಂದಿಸುವುದು ನಮ್ಮೆಲ್ಲರ ಜವಾಬ್ದಾರಿ. ಈಗ ಮಾನ್ಯ ನೀರಾವರಿ ಮಂತ್ರಿಗಳು ಸಭೆಯಲ್ಲಿಲ್ಲ

ಶ್ರೀ ಯು. ಭೂಪತಿ.—ಮಾನ್ಯ ಸದಸ್ಯರಿಗೆ ಸಣ್ಣ ನೀರಾವರಿ ಮಂತ್ರಿಗಳು ಇದ್ದರೂ ಅವರು ಕಾಣಿಸುವುದಿಲ್ಲ, ದಪ್ಪಗಿರುವವರು ಮಾತ್ರ ಕಾಣಿಸುತ್ತಾರೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಹಳ್ಳಿಗಳ ಕಡೆ ಒಂದು ಗಾದೆ ಹೇಳುತ್ತಾರೆ. 'ಎತ್ತಿಗೆ ಕಾಯಿಲೆ ಯಾದರೆ ಎಮ್ಮೆಗೆ ಬರೆ ಹಾಕಿದರು' ಎಂದು. ಕಾಯಿಲೆ ಇರುವುದು ಎತ್ತಿಗೆ ಎಮ್ಮೆಗೆ ಬರೆ ಹಾಕಿದರೆ ಕಾಯಿಲೆ ಪಾಸಿಯಾಗುತ್ತದೆಯೆ ? ಯಾರಿಗೆ ಕಾಯಿಲೆ ಇದೆಯೋ ಅವರಿಗೆ ಉಪಚಾರ ಮಾಡಬೇಕು. ಬ್ರಿಟಿಷ್ ಸರ್ಕಾರವಿದ್ದಾಗ ವೇದಾ ನದಿಗೆ ಮೂರಿ ಕಣಿವೆ ಅಣೆಕಟ್ಟು ಕಟ್ಟಿದ್ದಾರೆ. ವೇದಾ ನದಿ ನಮ್ಮ ಊರಿನ ಪಂಚಾಯತ್ತಿಯೇ ಹರಿಯುತ್ತಿದೆ. ಸಕ್ಕರೆ ಪಟ್ಟಣದ ಮುಂದೆ ಹರಿಯುತಕ್ಕ ನೀರನ್ನು ನಾವು ಉಪಯೋಗ ಮಾಡಲಿಕ್ಕೆ ನಮಗೆ ಹಕ್ಕು ಇಲ್ಲವೆಂದರೆ ಇದು ಯಾವ ನ್ಯಾಯ ಸ್ವಾಮಿ ? ಇದು 'ತೋಳ ಕುರಿಮರಿ' ನ್ಯಾಯ ಇದ್ದಹಾಗೆ ಇದೆ. ನಾನು ಹೇಳುವುದನ್ನು ಮಾನ್ಯ ಮಂತ್ರಿಗಳು ಬರವಣಿಗೆಯಲ್ಲಿ ಬರೆದುಕೊಂಡು ಇದನ್ನು ವಿಚಾರ ಮಾಡಬೇಕು, ೧೯೨೮ನೇ ಇಸವಿಯಲ್ಲಿ ಬ್ರಿಟಿಷ್ ಸರ್ಕಾರ ಮಾಡಿದಂತಹ ಕಾನೂನನ್ನು ಕಿತ್ತೆಸೆದು ನಮಗೆ ಅನುಕೂಲ ಮಾಡಿಕೊಡಬೇಕು. ಅಲ್ಲಲ್ಲಿ ಏತ ನೀರಾವರಿ ಯೋಜನೆಗಳನ್ನು ಮಾಡಿದರೆ ನಮ್ಮ ಭಾಗದ ರೈತರಿಗೆ ಅನುಕೂಲವಾಗುತ್ತದೆ. ಏತ ನೀರಾವರಿ ಯೋಜನೆಗಳನ್ನು ಮಾಡಿದರೆ ಮೂರಾಲ್ಕು ಸಾವಿರ ಎಕರೆ ಭೂಮಿ ನೀರಾವರಿಯಾಗುತ್ತದೆ. ನಮ್ಮ ಮನೆ ಮುಂದೆ ಹರಿಯುತಕ್ಕ ನೀರನ್ನು ನಾವು ಉಪಯೋಗಿಸುವ ಹಾಗೆ ಇಲ್ಲ. ದೂರದಲ್ಲಿರಪ ಚಿತ್ರದುರ್ಗದವರು ಉಪಯೋಗಿಸಬಹುದು. ಇದು ಅನ್ಯಾಯ ಇಲ್ಲವೆ ? ಇದರ ಬಗ್ಗೆ ಸರ್ಕಾರ ಸಮಾಲೋಚನೆ ಮಾಡಿ ವೇದಾ ನದಿಯಿಂದ ನಮ್ಮ ಭಾಗದ ಜನರಿಗೆ ನೀರಾವರಿ ಸೌಲಭ್ಯ ಸಿಗುವಂತೆ ಅನುಕೂಲ ಮಾಡಿಕೊಡಬೇಕೆಂದು ಸಭಾಧ್ಯಕ್ಷಣಿಯವರ ಮುಖಾಂತರ ಕೇಳಿಕೊಳ್ಳುತ್ತೇನೆ.

೪-೦೦ ಪಿ. ಎಂ.

ಬಂದಿರತಕ್ಕಂತಹ ಸಂಕಷ್ಟದಲ್ಲಿ ವಿರೋಧಪಕ್ಷದ ನಮ್ಮ ಶಾಸಕ ಹಿರಿಯ ಕಿರಿಯ ಮಿತ್ರರು ಭಾಗಿಯಾಗಿ ಇಡೀ ರಾಜ್ಯದಲ್ಲಿ ಬಂದಿರುವ ಬರವನ್ನು ಎದುರಿಸತಕ್ಕ ಸಂದರ್ಭದಲ್ಲಿ ತಮ್ಮ ಸಹಕಾರ ವನ್ನು ಕೊಡಿ ಎಂಬುದಾಗಿ ಕೇಳುತ್ತಿದ್ದೇನೆ. ಈ ರಾಜ್ಯದಿಂದ ಲೋಕಸಭೆಗೆ ನಿಮ್ಮ ಪಕ್ಷದ ಪತಿಯಿಂದ ೨೪ ಜನರು ಏನು ಆಯ್ಕೆಯಾಗಿ ಹೋಗಿದ್ದಾರೆ, ಅವರು ರಾಜ್ಯದಲ್ಲಿರುವ ಬಡಗಾಲದ ಬಗ್ಗೆ ಯಾವ ಪತ್ರಿಕೆಯಲ್ಲೂ ರಾಜ್ಯಕ್ಕೆ ಬರ ಬಂದಿದೆ, ಜನತೆ ಸಂಕಷ್ಟದಲ್ಲಿದ್ದಾರೆ. ದನಗಳಿಗೆ ಮೇವು ಇಲ್ಲದೆ ಸಾಯುತ್ತಿವೆ, ಜನಗಳೂ ಕೂಡ ಸಂಕಷ್ಟದಲ್ಲಿದ್ದಾರೆ ಅವರಿಗೆ ಸಹಾಯ ಮಾಡಬೇಕೆಂಬುದರ ಬಗ್ಗೆ ಒಂದು ಪತ್ರಿಕಾ ಹೇಳಿಕೆಯನ್ನೂ ಕೂಡ ಕೊಟ್ಟಿಲ್ಲ. ಅವರಾದರೂ ಹೆಚ್ಚು ಸಹಾಯವನ್ನು ಕೊಡಿ ಎಂಬುದಾಗಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕಾಗಿತ್ತು. ಆದರೆ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಮಲೆನಾಡಿನಿಂದ ಬಂದಿರತಕ್ಕಂತಹವರು. ಅವರಿಗೆ ಪರಿಸ್ಥಿತಿಯು ಅರಿವು ಇದೆ. ಅದೇ ರೀತಿ ಶ್ರೀಮಾನ್ ಕೆ. ಎಚ್. ಪಾಟೀಲರವರು ಹುಟ್ಟು ರೈತ ಕುಟುಂಬದಿಂದ ಬಂದಿರ ತಕ್ಕಂತಹವರು. ಅವರಿಗೆ ಗೊತ್ತಿದೆ ರೈತರ ಕಷ್ಟವೇನೆಂಬುದು. ಆದ್ದರಿಂದ ಇಂತಹ ಒಂದು ಸಂದರ್ಭದಲ್ಲಿ ಸರ್ಕಾರಕ್ಕೆ ಬೆಂಬಲವನ್ನು ಕೊಟ್ಟು ಸಹಕಾರವನ್ನು ಕೊಡಬೇಕೆಂದು ಹೇಳುತ್ತೇನೆ. ನಮ್ಮ ನಾಯಕರು ಈಗಾಗಲೇ ಹೇಳಿದ್ದಾರೆ. ನಮ್ಮ ರಾಜ್ಯದ ಜನತೆ ಏನು ಸಂಕಷ್ಟದಲ್ಲಿದ್ದಾರೆ, ಅವರಿಗೆ ಕೇಂದ್ರ ಹಣ ಕೊಡಲಿ, ಬಿಡಲಿ ಜನರು ಸಂಕಷ್ಟದಲ್ಲಿ ನರಳುವುದಕ್ಕೆ ಬಿಡುವುದಿಲ್ಲ ಎನ್ನುವ

ಮಾತನ್ನು ಬಹಳ ದಿಟ್ಟತನದಿಂದ ಹೇಳಿದ್ದಾರೆ, ಅದೇ ರೀತಿ ಅಂತಹ ಕೆಲಸವನ್ನು ಮಾಡಬೇಕಾದರೆ, ತಾವು ಕೂಡ ತಮ್ಮ ಸಹಕಾರವನ್ನು ಕೊಡಬೇಕೆಂದು ಸಲಹೆ ಮಾಡುತ್ತಾ, ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

† ಶ್ರೀ ಸಿ.ಎಂ. ರೇವಣ್ಣಸಿದ್ದಯ್ಯ (ಸಿರಗುಪ್ಪ)—.

ಮಾನ್ಯ ಅಧ್ಯಕ್ಷಣಿಯವರೆ, ರಾಜ್ಯಪಾಲರ ಭಾಷಣದ ಮೇಲೆ ಅದನ್ನು ಅಭಿನಂದಿಸುತ್ತಾ, ಅನು ಮೋದಿಸುತ್ತಾ ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪಿಸಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಹೆಚ್ಚಾಗಿ ಈ ದಿನ ಭೀಕರವಾಗಿ ಆವರಿಸಿರತಕ್ಕ ಬರಗಾಲದ ವಿಚಾರವನ್ನೇ ಮೂದಲನೆಯ ಅಂಶವಾಗಿ ಅವರು ಪ್ರಸ್ತಾಪ ಮಾಡಿದ್ದಾರೆ. ಇದು ಇಡೀ ರಾಜ್ಯಕ್ಕೆ ಮತ್ತು ದೇಶಕ್ಕೇನೆ ಸಂಬಂಧಿಸಿದಂತಹ ವಿಚಾರ. ಇಷ್ಟೊಂದು ವಿಕೋಪವಾದ ಬರಗಾಲ ಈ ರಾಜ್ಯದಲ್ಲಿ ಬಹುತೇಕ ಹಿಂದೆ ಎಂದೂ ಬಂದಿರಲಿಲ್ಲ. ಈ ಬರಗಾಲದ ಕಷ್ಟನಷ್ಟಗಳಿಗೆ ನೇರವಾಗಿ ಗುರಿ ಆಗಿರತಕ್ಕಂತಹವನು ರೈತರೆ ಮತ್ತು ಅಲ್ಲಿನ ಕೂಲಿಕಾರರು. ಅದರ ಪರಿಣಾಮ ಇವತ್ತು ಎಲ್ಲರಿಗೂ ಆಗುತ್ತಿದೆ ಏನ್ನುವುದರಲ್ಲಿ ಅನುಮಾನವೇ ಇಲ್ಲ. ಇವತ್ತು ಬಹಳಷ್ಟು ಚರ್ಚೆಯಲ್ಲಿ ಮಾನ್ಯ ಸದಸ್ಯರು ಏನು ಭಾಗವಹಿಸಿದ್ದಾರೆ, ಅವರೆಲ್ಲರೂ ಕಾಮಗಾರಿಗಳು ಆಗಬೇಕು, ಕೆಲಸ ಇಲ್ಲದವರಿಗೆ ಕೆಲಸವನ್ನು ಕೊಡಬೇಕೆಂಬುದೇ ಹೆಚ್ಚು ಪ್ರಸ್ತಾಪಮಾಡಿದ್ದಾರೆ. ಈ ಮನೆಯಲ್ಲಿ. ಆದರೆ ರೈತನಿಗೆ ಏನು ಕಷ್ಟನಷ್ಟವಾಗಿದೆ. ಅವನಿಗೆ ಆಗಿರುವಂತಹ ತೊಂದರೆಯ ಬಗ್ಗೆ ವಿಚಾರವನ್ನು ಮಾಡತಕ್ಕಂತಹ ಪ್ರಸಂಗವೇ ಬಂದಿಲ್ಲ. ಇವತ್ತು ರೈತ ತನ್ನಲ್ಲಿರತಕ್ಕಂತಹ ದನಕರುಗಳನ್ನು ಕಳೆದುಕೊಂಡಿದ್ದಾನೆ. ಎತ್ತುಗಳನ್ನು ಕಳೆದುಕೊಂಡಿದ್ದಾನೆ. ಬೇರೆಯವರಿಗಿಂತ ತೊಂದರೆಯಾಗಿರಬಹುದು. ಆದರೆ ಹೆಚ್ಚು ತೊಂದರೆಗೆ ಒಳಗಾಗಿರುವಂತಹನು ರೈತಮಾತ್ರ. ಈ ಒಂದು ಸಂದರ್ಭದಲ್ಲಿ ಒಂದು ಮಾತನ್ನು ಎಲ್ಲರೂ ತಿಳಿದುಕೊಳ್ಳಬೇಕು. ಅದು ಏನೆಂದರೆ, ದೊಡ್ಡ ರೈತ ಏನು ಇದ್ದಾನೆ ಅವರಿಗೇನು ಆಷ್ಟೊಂದು ತೊಂದರೆಯಾಗಿಲ್ಲ ಎಂದೂ ತಿಳಿದುಕೊಂಡಿರತಕ್ಕಂತಹದ್ದು ತಪ್ಪು. ಯಾರಿಗೆ ಹೆಚ್ಚು ಭೂಮಿ ಇದೆಯೋ ಅಂದರೆ ಮಿತಿಯೊಳಗೆ ಅಂದರೆ ೫೦ ಎಕರೆ ಒಣಭೂಮಿ, ಅಂದರೆ ಮಳೆಯ ಆಸರೆಯಿಂದ ಬೇಸಾಯವನ್ನು ಮಾಡತಕ್ಕ ರೈತ ಯಾರಿದ್ದಾನೆ, ಆ ಭೂಮಿಯಲ್ಲಿ ವ್ಯವಸಾಯ ಮಾಡಬೇಕಾದರೆ, ಆ ಭೂಮಿಗೆ ಆಗಷ್ಟು ಬೀಜಗಳನ್ನು ಒದಗಿಸಿ, ಗೊಬ್ಬರನ್ನು ಹಾಕಿ ಪ್ರತಿನಿತ್ಯ ಆಗುವಂತಹ ಕೂಲಿಯನ್ನು ಕೊಟ್ಟು, ಸಂತರ ಬೆಳೆ ಬರುತ್ತದೆ. ಆವಾಗ ಅವನು ಮಾಡಿರು ಮಂತಹ ಸಾಲವನ್ನು ತೀರಿಸಬೇಕು. ಮನೆಮಕ್ಕಳಿಗೆ ಬಟ್ಟೆಬರೆಯನ್ನು ತರಬೇಕು. ಸಂಸಾರವನ್ನು ಸಾಕುವುದರ ಜೊತೆಗೆ ಮುಂದೆ ಬಿತ್ತನೆಗೆ ಬೇಕಾಗುವಂತಹ ಬೀಜಗಳನ್ನು ಕಾದಿಡಬೇಕು. ಇಷ್ಟೆಲ್ಲಾ ತೊಂದರೆ ಆತನಿಗೆ ಇದೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ, ಮಳೆಯನ್ನೇ ಆಶ್ರಯಿಸಿ ಬೇಸಾಯ ಮಾಡುವಂತಹ ಈ ನಾಡಿನಲ್ಲಿ ಒಂದು ಎಕರೆ ವ್ಯವಸಾಯವನ್ನು ಮಾಡಬೇಕಾದರೆ, ಕನಿಷ್ಟ ೪೦೦ ರಿಂದ ೫೦೦ ರೂಪಾಯಿಗಳವರೆಗೆ ವೆಚ್ಚ ಬರುತ್ತದೆ. ಆದ್ದರಿಂದ ೫೦ ಎಕರೆ ಇರುವಂತಹ ದೊಡ್ಡ ರೈತ ನೊಬ್ಬನಿಗೆ ಕನಿಷ್ಟ ೧೦ ಸಾವಿರ ರೂಪಾಯಿಗಳವರೆಗೆ ಇವತ್ತಿನ ಬರಗಾಲದಿಂದ ನಷ್ಟವಾಗಿದೆ. ಅದಕ್ಕೆ ಪರಿಹಾರ ಏನು ? ಅವನಲ್ಲಿರತಕ್ಕಂತಹ ದನಕರುಗಳನ್ನು ಕಳೆದುಕೊಂಡಿದ್ದಾನೆ. ಕಾರಣ ಅವುಗಳಿಗೆ ಹಾಕುವಂತಹ ಮೇವೂ ಕೂಡ ಇಲ್ಲ. ಮುಂದೆ ಬಿತ್ತನೆ ಮಾಡುವುದಾದರೆ ಹೇಗೆ ? ಇದು ಬಹಳ ಸೂಕ್ಷ್ಮವಾಗಿ ವಿಚಾರಿಸತಕ್ಕ ವಿಚಾರವಾಗಿದೆ. ಆದರೆ ಅಂತಹ ರೈತನ ಬಗ್ಗೆ ಯಾರೂ ವಿಚಾರ ಮಾಡುವುದೇ ಇಲ್ಲ. ಇವತ್ತಿನ ಆಡಳಿತದ ವ್ಯವಸ್ಥೆಯಲ್ಲಿ ನೆಲ ಆಕಾಶ ಎರಡನ್ನೇ ನೋಡುತ್ತಿದ್ದೇವೆ. ಆದರೆ ಇವೆರಡರ ಮಧ್ಯ ಇರತಕ್ಕಂತಹ ವ್ಯವಸಾಯಗಾರರನ್ನೇ ನಾವು ಮರೆತುಬಿಟ್ಟಿದ್ದೇವೆ. ಕೂಲಿಗಾರರಿಗೂ ಕೆಲಸಬೇಕು. ಬರಗಾಲದಲ್ಲಿ ಅವರಿಗೆ ಕೆಲಸ ಮಾಡುವುದು ಬೇಡ ಅಂತ ಹೇಳುವುದಿಲ್ಲ. ಅವರು ಬದಕು ಮಾಡಿದ್ದಷ್ಟು ದಿವಸ ರೈತ ಕೂಲಿಯನ್ನು ಅವರಿಗೆ ಕೊಟ್ಟಿದ್ದಾನೆ ಒಂದು ದಿವಸದ ಕೂಲಿಯನ್ನಾದರೂ ರೈತ ಇಟ್ಟುಕೊಂಡಿಲ್ಲ. ಸಾಲವನ್ನು ತಂದೋ ಮನೆಯಲ್ಲಿರುವಂತಹ ಉಪಕರಣಗಳನ್ನಾಗಲಿ ಮಾರಿ ಕೂಲಿಯನ್ನು ಕೊಟ್ಟಿದ್ದಾರೆ. ಯಾರಿಗೂ ರೈತ ನಿಲ್ಲಿಸಿಲ್ಲ. ಬೀಜಕ್ಕಾಗಲಿ, ಗೊಬ್ಬರಕಾಗಲಿ ಯಾವುದಕ್ಕೂ ರೈತ ನಿಲ್ಲಿಸಿಲ್ಲ ಆದರೆ ಅವರಿಗೆ ಆದರಿಂದ ಬರತಕ್ಕಂತಹದ್ದು ಎಷ್ಟು ? ಇಂದು ಬರಗಾಲ ಬಂದು ನಷ್ಟ ಅನುಭವಿಸಬಹುದು. ಆದರೆ ರೈತನ ಉನ್ನತಿಗಾಗಿ ವ್ಯಾಪಾರಿಗಳ ಉನ್ನತಿಗಾಗಿ

ಈ ದೇಶದಲ್ಲಿ ಯೋಜನೆಯನ್ನೇ ಹಾಕಿಕೊಳ್ಳಲಿಲ್ಲ. ಇಂದು ನಾವುಗಳಿಲ್ಲರೂ ರೈತರ ಪ್ರತಿನಿಧಿಗಳೇ. ಅವರು ಪ್ರಧಾನಿಯೇ ಇರಬಹುದು, ಅಥವಾ ಇಲ್ಲಿನ ಮಾನ್ಯ ಮುಖ್ಯಮಂತ್ರಿಗಳು ಇರಬಹುದು, ಅಥವಾ ಶಾಸಕರಿರಬಹುದು. ನಾವೆಲ್ಲ ಪ್ರತಿನಿಧಿಸತಕ್ಕಂತಹದ್ದು ವ್ಯವಸಾಯಗಾರರನ್ನು ಎಂಬ ಮನೋಭಾವ ನಮಗೆಲ್ಲರಿಗೂ ಮೂಡಬೇಕಾಗುತ್ತದೆ. ವ್ಯವಸಾಯವೇ ಪ್ರಧಾನವಾದ ಈ ದೇಶದಲ್ಲಿ ೬ ಪಂಚವಾರ್ಷಿಕ ಯೋಜನೆಗಳಾದರೂ ಕೂಡ ಸಮಗ್ರವಾದ ಯೋಜನೆಯನ್ನು ವ್ಯವಸಾಯಗಾರರ ಬಗ್ಗೆ ಮಾಡಲಿಲ್ಲ. ಮುಂದೆ ಅವನು ಬದುಕಿ ಉತ್ತಮವಾದ ಜೀವನವನ್ನು ಮಾಡುವುದಕ್ಕೆ ಯೋಜನೆಯನ್ನು ಮಾಡಲಿಲ್ಲ. ಅಥವಾ ಉತ್ಕೃಷ್ಟವಾದ ಬೆಳೆಯನ್ನಾದರೂ ಬೆಳೆಯುವುದಕ್ಕೆ ಯಾವ ಕ್ರಮ ಹಾಕಿಕೊಂಡಿದ್ದಿರೀ ಇವತ್ತು ಬರ ಬಂದಾಗ ಬಾವಿ ತೋಡಿದರೂ ವ್ಯವಸಾಯವನ್ನು ಮಾಡಿ. ಬೆಳೆಯನ್ನು ಬೆಳೆಸುವುದಾಕ್ಕಾಗುವುದಿಲ್ಲ. ಬರ ಬರುತ್ತದೆ ಅದು ಯಾವ ರೀತಿ ಎದುರಿಸಬೇಕು ? ಬರ ಇಲ್ಲದಂತೆ ಮಾಡಬೇಕೆಂಬುದರ ಬಗ್ಗೆ ಯೋಜನೆಯೇ ಇಲ್ಲ. ಆ ರೀತಿಯ ಯೋಜನೆಗಳನ್ನು ಪ್ರಾರಂಭದಿಂದಲೂ ಕೇಂದ್ರವಾಗಲಿ, ರಾಜ್ಯವಾಗಲಿ ಹಾಕಿಕೊಂಡಿದ್ದಿದ್ದರೆ ಹೆಚ್ಚು ನೀರಾವರಿಯನ್ನಾಗಿ ಮಾಡಿದ್ದೇ ಆದರೆ, ಇವತ್ತು ಬರಗಾಲ ಸಮ್ಮನ್ನು ಹೆದರಿಸುವುದಕ್ಕಾಗುತ್ತಿರಲಿಲ್ಲ. ಬೇಕಾದಷ್ಟು ಬೆಳೆಯನ್ನು ಬೆಳೆಯಬಹುದಾಗಿತ್ತು. ಜನ ಸಂಪತ್ತು ಇರುವಂತಹ ದೇಶ ಇದು. ನೀರಿನ ಸಂತ್ತು ಇದೆ. ಭೂಸಂಪತ್ತೂ ಇದೆ. ಇದನ್ನು ಉಪಯೋಗಮಾಡಿಕೊಂಡು ಹೆಚ್ಚು ಆಹಾರಧಾನ್ಯಗಳನ್ನು ಉತ್ಪಾದನೆ ಮಾಡತಕ್ಕ, ಆ ರೀತಿಯ ವ್ಯವಸ್ಥೆಯನ್ನು ನಿರ್ಮಾಣ ಮಾಡತಕ್ಕ ಯೋಜನೆಯನ್ನು ೮ ವರ್ಷಗಳ ಆಡಳಿತದಲ್ಲಿ ಕೇಂದ್ರ ಯೋಜನೆಗಳಲ್ಲಿ ಹಾಕಲಾರದ್ದು ದುರ್ದೈವದ ಸಂಗತಿ. ಈ ಸರ್ಕಾರ ಮಾಡಲಿಲ್ಲ ಅಂತ ಅಲ್ಲ. ರಾಜ್ಯಮಟ್ಟದಲ್ಲಿ ಆಗುವಂತಹ ಯೋಜನೆಗಳಲ್ಲ. ಕೇಂದ್ರ ಮಟ್ಟದಲ್ಲಿ ಮಾಡಿರತಕ್ಕ ಯೋಜನೆಗಳು ಏನು ಇವೆ, ಆ ಯೋಜನೆಗಳಲ್ಲೇ ಲೋಪ ಇದೆ. ವ್ಯವಸಾಯಗಾರರ ಬಗ್ಗೆ ಮನೋಭಾವ, ನಿರ್ಲಕ್ಷ್ಯ ಮನೋಭಾವ ತೋರತಕ್ಕ ಯೋಜನೆಗಳನ್ನು ಮಾಡಿದ್ದಾರೆ. ಅವನೂ ಬದುಕಿ ಹೇಗೆ ಜೀವನ ಮಾಡಬೇಕೆಂಬುದನ್ನು ಯಾರು ತಿಳಿದುಕೊಂಡಿದ್ದಾರೆ ? ಬರಗಾಲ ಬಂತು ಎಂಬುದಾಗಿ ಎಲ್ಲರೂ ಹೇಳುತ್ತಾರೆ. ರೈತ ಬೆಳೆದರೆ ಎಲ್ಲರೂ ಚೆನ್ನಾಗಿ ತಿನ್ನುವುದರ ಜೊತೆಗೆ ಅವರೂ ಲಾಭ ಮಾಡಿಕೊಳ್ಳುತ್ತಾರೆ ಅವನು ಬೆಳೆದ ಪ್ರತಿಫಲ ಎಲ್ಲರಿಗೂ ಸಿಕ್ಕುತ್ತದೆ. ಆದರೆ ಇವತ್ತು ಅವನಿಗೆ ನಷ್ಟವಾಗಿದೆಯಲ್ಲಾ, ನೀವ್ಯಾರು ಕಟ್ಟಿಕೊಡುವುದಕ್ಕೆ ತಯಾರಾಗಿದ್ದೀರಿ ? ಯಾವ ಸರ್ಕಾರ ಕಟ್ಟಿಕೊಡುತ್ತದೆ ? ಬೆಳೆದರೂ ಅವನು ಬೆಳೆದ ಪ್ರತಿಯೊಂದು ಪದಾರ್ಥದ ಮೇಲೂ ಸುಂಕವನ್ನು ವಸೂಲು ಮಾಡುತ್ತಾರೆ. ಆದರೆ ಇವತ್ತು ಅವನು ಕಷ್ಟದಲ್ಲಿದ್ದಾನೆ, ಏನು ಪರಿಹಾರಕೊಡುತ್ತದೆ ? ಏನನ್ನೂ ಕೊಡುವುದಿಲ್ಲ. ಅದನ್ನು ಎದುರಿಸುವಂತಹ ಯೋಜನೆಗಳೇ ಇಲ್ಲವಾಗಿವೆ. ಆದೇ ಕಾರ್ಮಿಕರ ಬಗ್ಗೆ ಹೇಳುವುದಾದರೆ. ಕಾನೂನು ಅವರ ನೆರವಿಗೆ ಬರುತ್ತದೆ. ಇಷ್ಟೇ ಕೂಲಿ ಕೊಡಬೇಕೆಂದು ಇದೆ. ಅವನ ಜೀವನದ ವ್ಯವಸ್ಥೆಗೆ ಇಷ್ಟೆಲ್ಲಾ ಅವಶ್ಯಕತೆ ಇದೆ ಅಂತ ಹೇಳಿದ್ದಾರೆ. ನಂತರ ಸರಕಾರಿ ನೌಕರರಿಗೆ ಆಂಗಿದಾಗ್ಗೆ ಆಯೋಗಗಳನ್ನು ಅಂದರೆ ಅವರ ಸಂಬಳ ಸಾರಿಗೆಯನ್ನು ಟಿ. ಎ. ಡಿ. ಎ.ಯನ್ನು ಹೆಚ್ಚು ಮಾಡುವುದಕ್ಕಾಗಿ ಆಯೋಗಗಳನ್ನು ನೇಮಕ ಮಾಡಿಕೊಳ್ಳುತ್ತಾರೆ. ಅವರು ಎಲ್ಲವನ್ನೂ ಲೆಕ್ಕ ಹಾಕುತ್ತಾರೆ. ಸರ್ಕಾರಿ ನೌಕರ ಯಾರು ಇದ್ದಾನೆ, ಅವನ ಹಿಂದೆ ಅವನನ್ನೇ ನಂಬಿಕೊಂಡಿರತಕ್ಕಂತಹ ೧೦ ಮಂದಿಯ ಜೀವನಕ್ಕೂ ಬೇಕಾದ ಎಲ್ಲ ವ್ಯವಸ್ಥೆಗಳನ್ನು ಅವರ ವಸತಿ, ಅವರ ಅನ್ನವಸ್ತ್ರ, ಅವರ ಸಂತೋಷ ಜೀವನಕ್ಕೆ ಬೇಕಾದ ಅನುಕೂಲ, ಆಹ್ಲಾದಕರವಾದ ಬಳಕೆಗೆ ಬೇಕಾದ ದುಡ್ಡು. ಹಾಗೂ ಇನ್ನು ತರ ವ್ಯವಸ್ಥೆಗಳನ್ನೆಲ್ಲಾ ಯೋಚನೆ ಮಾಡಿ, ಮಾಡಿಕೊಡುತ್ತಾರೆ.

ಒಬ್ಬ ನೌಕರ ನಿವೃತ್ತನಾದರೆ ಅವನಿಗೆ ಪೆನ್‌ಷನ್ ಕೊಡುವುದು ಅಥವಾ ಕೆಲಸದಲ್ಲಿರುವಾಗ ಏನಾದರೂ ಸತ್ತರೆ ೧೦-೨೦ ಸಾವಿರ ರೂಪಾಯಿಗಳನ್ನು ಕೊಡುವುದು ಇವೆಲ್ಲ ಯೋಜನೆಗಳನ್ನು ಏತಕ್ಕೆ ಹಾಕುತ್ತಾರೆ?ಆ ಕೆಲಸ ಮಾಡತಕ್ಕವರಿಗೆ ಅದರ ಅಗತ್ಯ ಇದೆ,ಅವರ ಕೆಲಸಕ್ಕೆ ಪ್ರತಿಫಲಗಳು ಇರಬೇಕೆಂದು ಹಾಕುತ್ತಾರೆ, ಆದರೆ ರೈತರಿಗೆ ಏನಾದರೂ ಆ ರೀತಿ ಯೋಜನೆಗಳನ್ನು ಹಾಕಿದ್ದೀರಾ? ಅವನು ತನ್ನ ಜೀವಮಾನ ಪರ್ಯಂತ ದುಡಿದರೂ ೨-೩ ವರ್ಷ ಬರಗಾಲದ ದವಡೆಗೆ ಸಿಕ್ಕಿದರೆ ತಾನು ಸಾಯುವಾಗ ಮಗನಿಗೆ ಸಾಲ ಇಟ್ಟಿದೆ ಎಂದು ಹೇಳಿ ಹೋಗತಕ್ಕ ಪರಿಸ್ಥಿತಿ ಇದೆ. ಅವನು ಸತ್ತ ಮೇಲೆ ಏನೂ ಇರುವುದಿಲ್ಲ, ಬರೀ ಭೂಮಿ ಮಾತ್ರ ಇರುತ್ತದೆ. ಅವನ ಬದುಕು ಇಷ್ಟು ಅವ್ಯವಸ್ಥಿತವಾದರೂ ಅವನ ಜೀವನದ ಬಗ್ಗೆ ಯೋಚನೆ ಮಾಡದ ಸರ್ಕಾರಗಳು ಇವೆ. ಜನತಾ ಸರ್ಕಾರ ಆಡಳಿತಕ್ಕೆ

ಬಂದಿದೆ ಎಂದು ದೂಷಿಸಬಹುದು. ಆದರೆ ಇದುವರೆಗೆ ಆಳಿದವರು ರೈತರ ಸಲುವಾಗಿ ಯಾವುದೇ ಯೋಜನೆಗಳನ್ನು ಹಾಕದೆ ಇರುವುದು ದುರ್ದೈವದ ಸಂಗತಿ. ರೈತ ದಡ್ಡನಿದ್ದಾನೆ, ಅವನಿಗೆ ವಿದ್ಯೆ ಇಲ್ಲ, ಅನುಕೂಲಗಳು ಇಲ್ಲ, ಹಳ್ಳಿಯಲ್ಲಿ ಪಾಸಿಸುತ್ತಾನೆ, ಇದರಿಂದಾಗಿ ಅವನು ಹಿಂದೆ ಬಿದಿದ್ದಾನೆ. ಅವನು ಒಂದು ಕಡೆ ಸೇರಿ ಸಂಘಟಿತನಾದರೆ ತನಗೆ ಬೇಕಾದ ಅನುಕೂಲಗಳನ್ನು ಮಾಡಿಕೊಳ್ಳಬಹುದು. ಆದರೆ ಅವನಿಗೆ ಆ ಒಂದು ಶಕ್ತಿ ಬೆಳೆದಿಲ್ಲ. ಅವನು ಒಂದು ದಿನ ಒಂದಾದರೆ ಅವರ ರೀತಿಯೇ ಬದಲಾಗಬೇತ್ತದೆ, ಈ ದೇಶದಲ್ಲಿ ಅವನನ್ನು ಕಬಳಿಸಿ ಅನೇಕರು, ಅದರಲ್ಲಿ ಶಾಸಕರು ಸೇರಿ ಜೀವನ ಮಾಡುತ್ತಿದ್ದೇವೆ. ನಷ್ಟ ಸಂಬಳದಲ್ಲಿ ನಷ್ಟವಾಗಿದೆ ಎಂದು ಇಂಜಿನಿಯರುಗಳು, ವ್ಯವಸಾಯ್ಯಇಲಾಖೆಯವರು, ಮೊನ್ನೆ, ಮೊನ್ನೆ ಇಲ್ಲಿ ಬರಿತುಕೊಂಡು ಬರೆಯತಕ್ಕವರು (ವರದಿಗಾರರು) ಧರಣಿ ಮಾಡಿದರು. ಹೀಗೆ ಎಲ್ಲರೂ ಸಂಬಳ ಜಾಸ್ತಿ ಮಾಡಬೇಕೆಂದು ಧರಣಿ ಮಾಡುತ್ತಿದ್ದಾರೆಂದು ಕೇಳುತ್ತಿದ್ದೇವೆ. ಆದರೆ ರೈತರು ಎಲ್ಲಿ ಧರಣಿ ಮಾಡಬೇಕು? ಈ ಬಗ್ಗೆ ಅವನು ಬೆಳೆದ ಅನ್ನವನ್ನು ತಿನ್ನತಕ್ಕ ಮನುಷ್ಯರು ಯಾರಾದರೂ ಅವನ ಬಗ್ಗೆ ಯೋಚನೆ ಮಾಡಿದ್ದಾರೆಯೇ? ಇಲ್ಲ. ಇದುವರೆಗೆ ಬಹಳ ಜನ ಆಡಳಿತ ಮಾಡಿದ್ದಾರೆ, ಆದರೆ ಏನು ಪ್ರಯೋಜನ? ಇನ್ನು ಮುಂದಾದರೂ ದೇಶವನ್ನು ಆಳುವವರು, ರಾಜ್ಯವನ್ನು ಆಳುವವರು ರೈತರ ಬಗ್ಗೆ ಯೋಚಿಸಬೇಕು. ಈ ಸರ್ಕಾರದ ಬೊಕ್ಕಸಕ್ಕೆ ಹಣ ಯಾರಿಂದ ಬರುತ್ತಿದೆ, ಯಾರ ದುಡಿಮೆಯ ಪ್ರತಿಫಲ ದಿಂದ ಸಂಬಳ ತೆಗೆದುಕೊಂಡು ಸರ್ಕಾರಿ ನೌಕರರು ಬದುಕುತ್ತಿದ್ದಾರೆ ಎಂಬುದನು ಆಲೋಚಿಸಬೇಕು. ನವಾಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಅವನ ಬಗ್ಗೆ ವಿಚಾರ ಮಾಡದೆ ಇರುವುದು ದುರ್ದೈವ. ಯಾರು ನಮ್ಮನ್ನು ಆರಿಸಿ ಕಳುಹಿಸುತ್ತಿದ್ದಾರೆ,ಯಾರಿಂದ ನಾವಿದ್ದೇವೆ,ಯಾರಿಂದ ಪಾರ್ಲಿಮೆಂಟಾಗಲಿ, ಅಸೆಂಬ್ಲಿಯಾಗಲಿ ಇದೆ ಎಂಬುದನ್ನು ಆರಿತುಕೊಳ್ಳದೆ ಇದುವರೆಗೆ ಆಡಳಿತ ನಡೆದುಕೊಂಡು ಬಂದಿದೆ. ಇನ್ನು ಮುಂದಾದರೂ ಈ ಭಾವನೆ ತುರ್ತಾಗಿ ಬದಲಾಗಬೇಕೆಂದು ಆಶಿಸುತ್ತೇನೆ. ರೈತರು ಇಲ್ಲದಿದ್ದರೆ ನಾವು ಬದುಕಲಾರೆವು, ಸಮಗ್ರ ದೇಶ ಅವರಿಂದ ನಿಂತಿದೆ ಎಂಬುದನ್ನು ಅರಿಯಬೇಕು.ಅವನ ಜೀವನ ಇವತ್ತು ಎಷ್ಟು ನಿಕೃಷ್ಟವಾಗಿದೆ, ಎಷ್ಟು ಕೆಳಮಟ್ಟದಲ್ಲಿದೆ ಎಂಬುದನ್ನು ವಿಚಾರ ಮಾಡಬೇಕು. ಕೈಗಾರಿಕೋದ್ಯಮಿಗಳನ್ನು ತೆಗೆದುಕೊಂಡರೆ ಅವರು ಪದಾರ್ಥಗಳನ್ನು ತಯಾರಿ ಸುತ್ತಾರೆ. ಪದಾರ್ಥಗಳನ್ನು ತಯಾರಿಸತಕ್ಕ ಕಾರ್ಖಾನೆಯ ಬೆಲೆ ಎಷ್ಟು, ಅದಕ್ಕೆ ಹಾಕತಕ್ಕ ಬಂಡವಾಳಕ್ಕೆ ಬಡ್ಡಿ ಎಷ್ಟು, ಉತ್ಪತ್ತಿ ಮಾಡಲು ತಗಲತಕ್ಕ ಖರ್ಚು ಎಷ್ಟು, ಬೆಲೆ ಎಷ್ಟಿಡಬೇಕು, ಲಾಭ ಎಷ್ಟು ಪಡೆಯಬೇಕೆಂಬುದನ್ನೆಲ್ಲ ಲೆಕ್ಕ ಹಾಕತಕ್ಕವರು ಈ ದೇಶದಲ್ಲಿದ್ದಾರೆ, ಆದರೆ ಅವರು ಯಾರೂ ರೈತನ ಕಡೆಗೆ ಗಮನ ಕೊಡುತ್ತಿಲ್ಲ. ಅವನು ಇಡೀ ವರ್ಷವೆಲ್ಲ ಮೈಯನ್ನು ಸವೆದುಕೊಂಡರೂ ಏನೂ ಮನೆಯಲ್ಲಿ ಉಳಿಯುವುದಿಲ್ಲ. ಇಂಥ ದುರವ್ಯವಸ್ಥೆ ದೇಶದಲ್ಲಿ ನಡೆದುಕೊಂಡು ಬಂದಿದೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಎಲ್ಲಾ ವಿಜೃಂಭಣೆಯ ಕಾರ್ಯಕ್ರಮಗಳನ್ನು ಬಂದ್ ಮಾಡಬೇಕು, ಯಾವ ಯಾವ ಬಾಬುಗಳಿಗೆ ಏನೇನು ಕಡಿಮೆ ಮಾಡುವುದಕ್ಕೆ ಸಾಧ್ಯ ಅವೆಲ್ಲವನ್ನು ಕಡಿಮೆ ಮಾಡಬೇಕು. ಮನೆಯಲ್ಲಿ ದುಡಿಯುವ ಎತ್ತುಗಳು ಎರಡು ಇದ್ದರೆ ಮೇಯುವ ಹೋರಿಗಳು ನಾಲ್ಕು ಇರುತ್ತವೆ. ಅವು ದುಡಿಯುವುದಿಲ್ಲ. ಅಂಥವರು ಈ ಸರ್ಕಾರದಲ್ಲಿ ಇದ್ದಾರೆ. ಹಿಂದೆಯೂ ಇದ್ದರು, ಇವತ್ತೂ ಇದ್ದಾರೆ. ಒಕ್ಕಲಿಂತನ ಮಾಡುವವರು ''ಕರ ತಿಂತು ಹೊರೆ ಮೇವು'' ಅನ್ನುತ್ತೇವೆ. ಹಾಗೆ ಆಗಿದೆ ಸರ್ಕಾರದ ನಡವಳಿಕೆ. ಇದುಕ್ಷಮೊದಲು ಬದಲಾವಣೆ ಆಗಬೇಕು. ಇವತ್ತಿನ ದಿವಸ ಅನೇಕ ಇಲಾಖೆಗಳು ಇವೆ ಆ ಖಾತೆಗಳಿಗೆ ಯಾರು ಯಾರು ಮಂತ್ರಿ ಗಳಾಗಿರುತ್ತಾರೋ ಕಾರ್ಯದರ್ಶಿಗಳಾಗಿರುತ್ತಾರೋ,ಅವರು ನನ್ನ ಖಾತೆಗೆ ೧೦ ಕೋಟಿ ಬೇಕು, ೨೦ ಕೋಟಿ ಬೇಕು ಅನ್ನುತ್ತಾರೆ.ಈ ರೊಕ್ಕ ಯಾರದ್ದು ಮತ್ತು ಏತಕ್ಕೆ ಖರ್ಚಾಗುತ್ತಿದೆ ಎಂಬುದನ್ನು ವಿಚಾರ ಮಾಡಬೇಕು. ಇರಿಗೇಷನ್ನಿಗೆ ಹೆಚ್ಚಿಗೆ ಹಣ ಕೊಡಬೇಕಾಗಿದೆ. ಇವತ್ತು ನಮ್ಮಲ್ಲಿ ಇರಿಗೇಷನ್ ಫೆಸಿಲಿಟೀಸ್ ಸಾಕಷ್ಟು ಇಲ್ಲದೆ ಬರಗಾಲ ಬಂತು ಎನ್ನಬಹುದು. ಆದನ್ನು ಹೆಚ್ಚು ಮಾಡಿದ್ದರೆ ಇವತ್ತು ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಈ ಕಾರ್ಯ ಏತಕ್ಕೆ ಕುಂಠಿತವಾಯಿತು? ಈ ಭಾರವನ್ನು ಯಾರ ಮೇಲೆ ಹೊರಿಸಬೇಕು? ಇಂಥ ಒಂದು ಶೋಚನೀಯ ಪರಿಸ್ಥಿತಿಯಲ್ಲಿ ರೈತರು ಜೀವಿಸುತ್ತಿದ್ದಾರೆ. ಆದಕಾರಣ ಈ ಬರಗಾಲದಲ್ಲಾದರೂ ಯೋಚಿಸಿ ಆಡಳಿತ ನಡೆಸತಕ್ಕವರು ವ್ಯವಸಾಯಗಾರರು ಬದುಕುವಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಕೂಲಿಗಾರರಿಗೆ ಕೆಲಸ ಒದಗಿಸುತ್ತಿದ್ದೇವೆ. ದನಗಳಿಗೆ ಮೇವು ಸರಬರಾಜು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ನೀವು ಒದಗಿಸಿದ ಮೇವು ಎಷ್ಟರ ಮಟ್ಟಿಗೆ ಅವುಗಳಿಗೆ ಸಾಕಾಗುತ್ತದೆ

ಎಂಬುದನ್ನು ಯೋಚಿಸಬೇಕು. ನಮ್ಮ ಮನೆಯಲ್ಲಿ ಮಾಡಿದ ಅಡಿಗೆಯನ್ನು ಉಣ್ಣು ವುದಕ್ಕೂ ಇನ್ನೊಬ್ಬರ ಮನೆಯಲ್ಲಿ ಹಾಕಿದ್ದನ್ನು ತಿನ್ನುವುದಕ್ಕೂ ಎಷ್ಟು ವ್ಯತ್ಯಾಸ ಇರುತ್ತದೆಂಬುದನ್ನು ಯೋಚನೆ ಮಾಡಬೇಕು.

(ಅಧ್ಯಕ್ಷರು ತಮ್ಮ ಪೀಠಕ್ಕೆ ಬಂದರು)

ದನಗಳು ಸಾಯುಬಾರದೆಂದು ನೀವು ಕೊಡುತ್ತಿರಿ. ನಾನು ಕೂಡ ಬಹಳ ವರ್ಷಗಳಿಂದ ಒಕ್ಕಲಿಂತನ ಮಾಡುತ್ತಿದ್ದೇನೆ. ಅವರು ಕೊಡತಕ್ಕ ಮೇವು ಏನೂ ಸಾಕಾಗುವುದಿಲ್ಲ. ರಾಜ್ಯ ಸರ್ಕಾರದವರಾಗಲಿ ಅಥವಾ ಕೇಂದ್ರ ಸರ್ಕಾರದವರಾಗಲಿ ಬರಗಾಲದ ಬಗ್ಗೆ ರೈತರಿಗೆ ಯಾವ ವ್ಯವಸ್ಥೆ ಮಾಡಿದ್ದಾರೆ? ನಾವು ಮೊನ್ನೆ ಜಾಲಪ್ಪನವರ ಬಂತ್ತು ಈ ಸರ್ಕಾರದ ಮುಂದೆ ಈಗ ತೆಗೆದುಕೊಂಡಿರತಕ್ಕ ಸಾಲಗಳನ್ನು ಬಂಧ್ಯಮಾಪಥಿ ಸಾಲವನ್ನಾಗಿ ಪರಿವರ್ತನೆ ಮಾಡಿ ಎಂದು ಹೇಳಿದ್ದೇವೆ, ಆಲ್ಲದೆ ಬಡ್ಡಿಯನ್ನು ಮಾಫಿ ಮಾಡಿ ಅಸಲನ್ನು ಕಟ್ಟುವುದಕ್ಕೆ ಕಂತು ಕೊಡಿ ಎಂದು ಕೇಳಿಕೊಂಡಿದ್ದೇವೆ. ಆ ಸಾಲವನ್ನೇ ಏತಕ್ಕೆ ಮನ್ನಾ ಮಾಡಬಾರದೆಂದು ಕೇಳಂತ್ತೇನೆ. ಈ ಬಗ್ಗೆ ಸರ್ಕಾರ ವಿಚಾರ ಮಾಡಬೇಕು. ಬರಗಾಲದಲ್ಲಿ ರೈತರಿಗೆ ಎಷ್ಟು ನಷ್ಟವಾಗಿದೆ ಎಂಬುದನ್ನು ಲೆಕ್ಕ ಹಾಕಿ ಪರಿಹಾರ ನೀಡುವುದಕ್ಕೆ ಕೇಂದ್ರದಿಂದ ಒಂದಂ ಯೋಜನೆ ಹಾಕತಕ್ಕ ವ್ಯವಸ್ಥೆ ಆಗಬೇಕು. ಈ ಬಗ್ಗೆ ರಾಜ್ಯ ಸರ್ಕಾರ ಉತ್ತರ ಹೇಳಬೇಕು. ಈಗ ನೀವು ಮಾಡಿರುವುದಾದರೂ ಏನು? ದನಗಳಿಗೆ ಮೇವು ಒದಗಿಸಿ ಕೊಟ್ಟಿದ್ದೀರಿ ಮತ್ತು ಬಡ್ಡಿ ತೆಗೆದು ಸಾಲ ಕಟ್ಟುವುದಕ್ಕೆ ೩ ಕಂತುಗಳನ್ನು ಕೊಟ್ಟಿದ್ದೀರಿ. ರೈತನಿಗೆ ಮಳೆ ಇಲ್ಲ, ಬೆಳೆ ಆಗಿಲ್ಲ, ಆಂದಾಗ ಅವನು ಹೇಗೆ ಸಾಲ ಕಟ್ಟಬೇಕು? ರೈತ ಅನ್ನ ಕೊಟ್ಟಿದ್ದಾನೆ, ಸರ್ಕಾರಕ್ಕೆ ತೆರಿಗೆ ಕೊಟ್ಟಿದ್ದಾನೆ. ಅವನು ಅನ್ನ ಕೊಟ್ಟಿರುವುದು ಈಗಿರುವವರಿಗೆ ಮಾತ್ರವಲ್ಲ, ಇವರ ಅಪ್ಪನಿಗೆ, ತಾತನಿಗೆ ಎಲ್ಲ ಕೊಟ್ಟಿದ್ದಾನೆ, ಅಂಥ ರೈತ ಸಾಲ ತೆಗೆದುಕೊಂಡಿರುವುದನ್ನು ಬಿಡಿ. ಏತಕ್ಕೆ ಬಿಡಬಾರದು? ಅವನು ಗಳಿಸಿಕೊಂಡು ಮನೆಯಲ್ಲಿಟ್ಟುಕೊಂಡಿದ್ದಾನೆಂದರೆ ತಪ್ಪು. ಇವತ್ತಿನ ದಿವಸ ಏಷ್ಟೋ ಮಂದಿ ಕರೆಂಟ್ ಬಿಲ್ ಕಟ್ಟದೆ, ಇನ್‌ಕಂ ಟ್ಯಾಕ್ಸ್ ಕಟ್ಟದೆ, ಸೇಲ್ಸ್ ಟ್ಯಾಕ್ಸ್ ಕಟ್ಟದೆ, ಬಾಡಿಗೆ ಕಟ್ಟದೆ ಇರುವವರು ಇದ್ದಾರೆ, ಆದರೆ ರೈತನ ದುರ್ದೈವ ಹೀಗೆ ಇದೆ. ಅವರ ದೈವ ಹಾಗಿದೆ, ಅಂತ ರೈತನಿಗೆ ಸಾಲವನ್ನು ಮಾಡಬಾರದು? ಅದು ಯಾರಪ್ಪನ ಮನೆಯ ಗಂಟು? ಅದು ರೈತ ಕೊಟ್ಟ ಗಂಟೇ ಹೊರತು ಬೇರೆ ಅಲ್ಲ. ಯಾರ ತಾತನ ಪಾನೆಯ ಗಂಟೂ ಅಲ್ಲ. ನಾನು ಅಲ್ಲದಿದ್ದರೂ ನಮ್ಮ ಅಪ್ಪ ಕೊಟ್ಟಿದ್ದಾನೆ. ನಮ್ಮ ಮಕ್ಕಳು ಕೊಡುತ್ತಾರೆ. ಈ ದೇಶ ನಡೆಯುವುದೇ ಅದರ ಮೇಲೆ. ಆದ್ದರಿಂದ ಹೇಳುತ್ತಿದ್ದೇನೆ, ಕೇವಲ ರಾಜ್ಯ ಸರ್ಕಾರ ಒಂದೇ ಅಲ್ಲ, ಕೇಂದ್ರ ಸರ್ಕಾರ ಕೂಡ ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು. ನಾನು ಯಾವಾಗಲೂ ಆಳುವ ಪಕ್ಷದವನು ಅಲ್ಲ, ನಾನು ಯಾವತ್ತೂ ವಿರೋಧ ಪಕ್ಷದ ಮನುಷ್ಯ, ೧೯೬೨ರಲ್ಲಿ ನಾನು ಶಾಸಕನಾಗಿ ಕುಳಿತಿದ್ದೆ. ಇವತ್ತು ಸುದೈವಕ್ಕೋ ದುರ್ದೈವಕ್ಕೋ ಇದ್ದೇನೆ. ಈ ದೇಶದಲ್ಲಿ ರೈತರಿಗೆ ಬಹಳಷ್ಟು ಅನ್ಯಾಯ, ಮೋಸ ವಂಚನೆ ಆಗಿದೆ. ಯಾರ ಹೆಸರಿನಲ್ಲಿ ಆಡಳಿತ ಈ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ನಡೆಯುತ್ತಿದೆಯೋ ಅವರಿಗೆ ವಂಚನೆ ಮಾಡಿದ್ದಾರೆ. ಅವರಿಗಿಂತ ವಂಚಕರು ದೇಶದಲ್ಲಿ ಯಾರಿದ್ದಾರೆ? ಇಲ್ಲಿಯವರೆಗೆ ಮಾಡಿದ್ದು ಆಯಿತು. ಇನ್ನು ಮುಂದಾದರೂ ಅವನ ಹಿತಚಿಂತನೆಮಾಡಿ. ಅವನು ಮಾಡಿರತಕ್ಕ ಸಾಲಗಳು ಏನಿವೆ ಅವನ್ನು ಕೂಡಲೇ ಮನ್ನಾ ಮಾಡಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಅರಿಕೆ ಮಾಡಿಕೊಳ್ಳುತ್ತೇನೆ. ಮತ್ತು ಮುಂದೆ ಪುನಃ ಸಾಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಅವೇಕ ಮಂದಿ ಸಾಹುಕಾರರು ಗಂಟು ಬಿಟ್ಟವರು ಇದ್ದಾರೆ. ಅವರನ್ನು ನಾವು ದೂಷಿಸುತ್ತಿದ್ದೇವೆ. ಆದರೆ ಸರ್ಕಾರ ಕೆಲಸ ಮಾಡಿಲ್ಲ. ಸಾಲ ಕೊಡಲಿಲ್ಲವೆಂದರೆ ಭೂಮಿಯನ್ನು ವಹಿಸಿಕೊಳ್ಳುತ್ತದೆ, ಮನೆಯನ್ನು ವಹಿಸಿಕೊಳ್ಳುತ್ತದೆ. ಇವತ್ತು ರೈತ ಅಲಕ್ಷ್ಯಕ್ಕೆ ಈಡಾಗಿದ್ದಾನೆ. ಅವನ ಅಳಲನ್ನು ಕೇಳುವುದಕ್ಕೆ ಸರ್ಕಾರಕ್ಕೆ ಟೈಂ ಇಲ್ಲ. ನಮ್ಮ ಸದಸ್ಯರಲ್ಲಿ ಬಹುತೇಕ ಮಂದಿ ರೈತರಿದ್ದೇವೆ. ರೈತರು ಬಂದು ಎರಡು ದಿವಸ ಕಾಯ್ದರೂ ಅವರೊಡನೆ ಮಾತನಾಡುವುದಕ್ಕೆ ಸರ್ಕಾರ ಟೈಂ ಇಲ್ಲ ಅನ್ನುತ್ತದೆ.

ಇದೆಂಥ ಅಸಂದರ್ಭ ಎಂದು ನನಗನ್ನಿಸುತ್ತದೆ. ಮೊದಲ ಪ್ರಾಶಸ್ತ್ಯ ಅವನಿಗೆ ಕೊಡಿ. ೧೦೦ಕ್ಕೆ ೮೦ ಜನ ಇರತಕ್ಕ ರೈತರಿಗೆ ಅವಕಾಶವನ್ನು ಕಾದಿರಿಸಿ. ೭೦ ರಷ್ಟು ಸಮಯಾವಕಾಶವನ್ನು ಅವನ ಸಂದರ್ಶನಕ್ಕೆ, ವಿಚಾರ ವಿನಿಮಯಕ್ಕೆ, ಅವನ ಏರ್ಚಿಗೆ ಸೀಡಬೇಕು. ೭೦ ರಷ್ಟು ಖರ್ಚು ಹಳ್ಳಿಯ ರೈತನಿಗೆ ಆಗಬೇಕು. ನಂತರ ಪಟ್ಟಣಕ್ಕೆ ಇತರರಿಗೆ ಆಗಬೇಕು. ಇದನ್ನು ಇದುವರೆಗೆ ಯಾರೂ

ಮಾಡಿಲ್ಲ. ಇನ್ನು ಮೇಲಾದರೂ ಮಾಡಬೇಕು. ಇಪತ್ತು ಈ ವಿಷಯವನ್ನು ಹೇಳುತ್ತಾ ಈಗಲಾದರೂ ಬಜೆಟ್ಟಿನಲ್ಲಿ ಅವನಿಗೆ ಸೌಲಭ್ಯ ಮಾಡಿಕೊಡಿ ಎಂದು ಹೇಳುತ್ತೇನೆ. ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳದಹಾಗೆ ಮಾಡಬೇಕು, ಮೂರು ಕಂತು ಅವರಿಗೆ ಕೊಟ್ಟರಂತೂದು ಸಾಲದು, ಸಾಲ ಮಾಫಿ ಮಾಡಬೇಕು. ವ್ಯವಸಾಯ ಮಾಡುವುದಕ್ಕೆ ಏನೇನು ತೊಂದರೆಯಾಗಿದೆ ಎಂಬುದನ್ನು ಗಮನಿಸಿ ಮುಂದಿನ ಬಿತ್ತನೆ ಕಾಲದೊಳಗೆ ಏನು ವ್ಯವಸ್ಥೆ ಮಾಡಬೇಕೋ ಮಾಡಿ. ಬೇರೆ ಎಲ್ಲಾ ಬಿಡಿ. ಸರ್ವಜ್ಞ ಹೇಳಿದ್ದಾನೆ ವ್ಯವಸಾಯ ಬಿಟ್ಟರೆ ದೇಶ ನಿಂತಹೋಗುತ್ತದೆ, ಬೇರೆ ಬಿಟ್ಟರೆ ದೇಶ ಏನೂ ಆಗುವುದಿಲ್ಲ. ನಮ್ಮ ಸರ್ಕಾರಿ ನೌಕರರು ಪೆನ್ ಡೌನ್ ಸ್ಟ್ರೈಕ್ ಮಾಡುತ್ತಾರೆ. ಪೆನ್‌ಡೌನ್ ಮಾಡಿದರೆ ಕತ್ತಲಾಗುತ್ತದೆ, ಬೆಳಕಾಗುವುದಿಲ್ಲ ಎಂದು ಹೇಳುತ್ತಾರೆ. ಅದೇನೂ ಇಲ್ಲ. ಎಲ್ಲಾ ನಡೆಯುತ್ತದೆ. ಆದರೆ ರೈತ ಏನಾದರೂ ಪೆನ್ ಡೌನ್ ಮಾಡಿದರೆ ಎಲ್ಲ ನಿಲ್ಲುತ್ತದೆ. ಪೆನ್ ಡೌನ್‌ನಿಂದ ಏನೂ ನಿಲ್ಲುವುದಿಲ್ಲ. ಹೆಚ್ಚು ಅನುಕೂಲ ಇರುವವರಿಗೇ ಇನ್ನೂ ಅನುಕೂಲ ಮಾಡಿಕೊಡಬೇಕು ಎಂದು ಆಸೆಪಡುತ್ತಾರೆ. ಅನಾನುಕೂಲ ಇರುವವರನ್ನು ನೋಡುವುದಕ್ಕೂ ಇಚ್ಛೆ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ರೇವಣಸಿದ್ದಯ್ಯನವರೇ, ಸರ್ವಜ್ಞ ಹೇಳಿದ್ದಾನೆ. '' ಕೋಟಿ ವಿದ್ಯೆಗಿಂತ ಪೇಟಿ ವಿದ್ಯೆಯೇ ಮೇಲು, ಪೇಟೆಯಿಂ ರಾಟಿ ನಡೆದಂದಲ್ಲದೆ ದೇಶ ದಾಟವೇ ಕೆಡಗುಂ ಸರ್ವಜ್ಞ '' ಎಂದು.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಥ್ಯಾಂಕ್ ಯು ಸಾರ್. ನಾನು ಈಗ ನಮ್ಮ ಸರ್ಕಾರವನ್ನು ಬೇಡಿಕೊಳ್ಳುತ್ತಿದ್ದೇನೆ, ಎಲ್ಲಾ ಕಾರ್ಯಕ್ರಮಗಳನ್ನು ಆಡಂಬರದ ವಿಚಾರಗಳನ್ನು ಬಿಟ್ಟು ರೈತರಿಗೆ ಆಧ್ಯತೆ ಕೊಟ್ಟು ಅವನನ್ನು ಮಾತನಾಡಿಸುವುದಲ್ಲದೆ ಅವನಿಗಾಗಿ ಕೆಲಸ ಮಾಡಬೇಕೆಂದು. ಬರಗಾಲದ ಬಗ್ಗೆ.....

ಅಧ್ಯಕ್ಷರು.—೨೦ ನಿಮಿಷ ಆಯಿತು, ದಯವಿಟ್ಟು ಬೇಗ ಮುಗಿಸಿ.

ಶ್ರೀ ವೈ. ಕೆ. ರಾಮಯ್ಯ.—ತುಂಬಾ ಮುಖ್ಯವಾದ ವಿಷಯಗಳನ್ನು ಅವರು ಹೇಳುತ್ತಿದ್ದಾರೆ. ಇನ್ನೂ ಸ್ವಲ್ಪ ಟೈಂ ಅವರಿಗೆ ಕೊಡಬೇಕು.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಅಡವಿಯಿಂದ ಮಳೆ ಬರುತ್ತದೆ ಎಂದು ಹೇಳುತ್ತಾರೆ. ಅಡವಿ ಬೆಳೆಸುವ ಕಾರ್ಯಕ್ರಮವನ್ನು ಮೊದಲಿನಿಂದಲೂ ಮಾಡುತ್ತಿದ್ದಾರೆ. ೨೦ ವರ್ಷದಿಂದ ಈ ಕಾರ್ಯಕ್ರಮ ನೋಡುತ್ತಿದ್ದೇವೆ. ಈಗ ಎಷ್ಟು ಕಡೆ ಅಡವಿ ಬೇಕಿದೆ ? ಬೆಳೆಸುವುದು ಕಡಿಮೆ ಯಾಗಿದೆ. ಈ ಯೋಜನೆಗೆ ಬಹಳಷ್ಟು ರೊಕ್ಕ ಇಡುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಅಡವಿ ಬೆಳೆಸುವುದಕ್ಕೆ ೮೫ ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಹೇಳಿದರು. ನಾನು ಫಾರೆಸ್ಟ್ ಆಫೀಸರನ್ನು ಕೇಳಿದೆ, ೮೫ ಲಕ್ಷ ರೂಪಾಯಿಗಳಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಹೆಕ್ಟೇರ್ ಬೆಳೆಸಿದ್ದೀರಿ ತೋರಿಸಿ ಎಂದು. ಆದರೆ ಅವರು ತೋರಿಸಲಿಲ್ಲ. ಅಡವಿ ಬಹಳ ಮುಂಖ್ಯ. ಆದರೂ ಕೆಲಸ ಸರಿಯಾಗಿ ಆಗದೆ ಇಂಥ ಖರ್ಚುಗಳು ಸರ್ಕಾರದಲ್ಲಿ ಆಗುತ್ತಿವೆ. ಅದಕ್ಕೆ ಆಗಲೇ ಹೇಳಿದೆ ಎರಡು ಎತ್ತು ದುಡಿಯುತ್ತವೆ, ನಾಲ್ಕು ಹೋರಿ ಗಳು ಮೇಯುತ್ತಿವೆ ಎಂದು. ಈ ಖರ್ಚು ಕಡಿಮೆ ಮಾಡಿ. ಹೋರಿಗಳನ್ನು ಕಟ್ಟಿಹಾಕಿ ಎತ್ತಿನ ಕಡೆ ನೋಡಿ. ಎತ್ತು ದುಡಿದರೆ ಹೋರಿ ಬದುಕುತ್ತದೆ. ಇದನ್ನು ತಿಳಿದು ಕೊಳ್ಳಬೇಕು. ಡಿಪಾರ್ಟ್‌ಮೆಂಟ್‌ಗಳು, ಬೋರ್ಡ್‌ಗಳು ಸರ್ಕಾರದಲ್ಲಿ ಬಹಳ ಇವೆ. ಆದರೆ ಯಾರಂ ಯಾರು ಏನೇನು ಕೆಲಸ ಮಾಡುತ್ತಾರೋ ಗೊತ್ತಿಲ್ಲ. ನನಗೆ ಐದಾರು ಡಿಪಾರ್ಟ್‌ಮೆಂಟ್ ಗೊತ್ತು. ರೆವಿನ್ಯೂ, ಹೆಲ್ತ್, ಪೋಲೀಸ್ ಇಷ್ಟೇ ಗೊತ್ತು. ಆದರೆ ೫೦-೬೦ ಡಿಪಾರ್ಟ್‌ಮೆಂಟ್‌ಗಳಿವೆ. ಯಾವ ಯಾವ ಡಿಪಾರ್ಟ್‌ಮೆಂಟ್ ಏನೇನು ಕೆಲಸ ಮಾಡುತ್ತಿದೆಯೋ ಗೊತ್ತಿಲ್ಲ. ಎಷ್ಟು ನೌಕರರಿದ್ದಾರೋ ಏನೇನು ಮಾಡುತ್ತಾರೋ ಗೊತ್ತಿಲ್ಲ, ಅನೇಕ ವಿಷಯಗಳನ್ನು ನೋಡಿದ್ದೇವೆ. ಆದರೆ ಸಾಧನೆಗಳಿಲ್ಲ. ಅನುಕೂಲಗಳಿಲ್ಲ. ಅನೇಕ ವಿಚಾರಗಳು ಮರೆಮಾಚಿ ಹೋಗುತ್ತವೆ. ಅದು ಆಗಬಾರದು. We must know things. Every legislator is equal to a Minister. ಏಕೆಂದರೆ ಅವನ ಕ್ಷೇತ್ರಕ್ಕೆ ಅವನೇ ಉತ್ತರ ಕೊಡಬೇಕು. ಆದ್ದರಿಂದ ಅಲ್ಲಿಗೆ ಅವನು ಮುಖ್ಯಮಂತ್ರಿ ಇದ್ದಹಾಗೆ. ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ, ವಿಜೃಂಭಣೆ ಕಾರ್ಯಕ್ರಮಗಳನ್ನು, ಅನಾವಶ್ಯಕ ಖರ್ಚು ಗಳನ್ನು ಕಡಿಮೆ ಮಾಡಿ. ರೈತರಿಗೆ ಪ್ರಯೋಜನ ಆಗತಕ್ಕ ವ್ಯವಸ್ಥೆಯನ್ನು ಬರತಕ್ಕ ಬಜೆಟ್ಟಿನಲ್ಲಿ ಆಳವಡಿಸಿ ಎಂದು ಕೇಳಿಕೊಳ್ಳುತ್ತೇವೆ. ಅಡಳಿತದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆಡಳಿತ

ಸುಧಾರಣೆ ಆಗಿಲ್ಲ ಎಂಬ ಮಾತನ್ನು ನಾನು ಹೇಳಬೇಕಾಗಿದೆ. ಅನೇಕ ಸಾರಿ ಮುಖ್ಯಮಂತ್ರಿಗಳಿಗೆ ನಾನು ಹೇಳಿದ್ದೇನೆ. ನಿಮ್ಮ ಆಶ್ರಯದಲ್ಲಿ ಅಧಿಕಾರಿಗಳು ಏನಾ ಏನಾ ನಡೆಯುತ್ತಿದ್ದಾರೆ, ಅವರನ್ನು ವಿಚಾರಿಸಿಕೊಳ್ಳಬೇಕು ಎಂದು. ಅಧಿಕಾರಿಗಳು ಇರುವುದು ಯಾರ ಸಲುವಾಗಿ ? ದೇಶ ಇರುವುದು ಅಧಿಕಾರಿಗಳ ಸಲುವಾಗಿ ಅಲ್ಲ. ಅಧಿಕಾರಿಗಳಿರುವುದು ಜನರ ಸಲುವಾಗಿ, ದೇಶದ ಸಲುವಾಗಿ. ಸರ್ಕಾರಿ ನೌಕರರು ಕೆಳಗಿನಿಂದ ಮೇಲಿನವರೆಗೆ ವಿಲೇಜ್ ಅಕೌಂಟೆಂಟಿನಿಂದ ಚೀಫ್ ಸೆಕ್ರೆಟರಿಯಂವರೆಗೆ ದೇಶದ ಹಿತಾಸಕ್ತಿಗಾಗಿ ಕೆಲಸ ಮಾಡಬೇಕು. ಅವರ ಸಂಬಳ ಲೆಕ್ಕ ಹಾಕಿದರೆ.....

ಶ್ರೀ ಕೆ. ಎಚ್. ಪಾಟೀಲ್.—ಬಹಳ ಕಳಕಳಿಯಿಂದ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಅವರೆ ಒಬ್ಬರಾದರೂ ಫೈನಾನ್ಸ್ ಸೆಕ್ರೆಟರಿ ಅಥವಾ ಇತರ ಅಧಿಕಾರಿಗಳು ಹಾಜರಿದ್ದಾರಾ ? ನಾವು ಹೇಳಿದ ಕೂಡಲೇ ವಿರೋಧ ಪಕ್ಷದವರು ಹೇಳುತ್ತಾರೆ ಎಂದು ಹೇಳುತ್ತಾರೆ. ಆದರೆ ತಮ್ಮ ಪಕ್ಷದವರೇ ವಾತನಾಡುತ್ತಿದ್ದಾರೆ. ಜೆ. ಎಚ್. ಪಟೇಲರು ನೋಡುತ್ತಿದ್ದಾರೆ.

ಅಧ್ಯಕ್ಷರು.—ಪಾಟೀಲರೇ, ಇವರೇ ಕೇಳಿಕೊಂಡು ಸೆಕ್ರೆಟರಿಗಳಿಗೆ ಹೇಳುತ್ತಾರೆ.

ಶ್ರೀ ಕೆ. ಎಚ್. ಪಾಟೀಲ್.—ದಯವಿಟ್ಟು ಅಧಿಕಾರಿಗಳನ್ನು ಕರೆಸಿ. ಇಷ್ಟು ಲಘುವಾಗಿ ಅವರನ್ನು ಬಿಡಬೇಡಿ. ಇವತ್ತು ನೀವು ಅಧಿಕಾರದಲ್ಲಿರಬಹುದು, ನಾಳೆ ನಾವು ಬರಬಹುದು. ಆದರೆ ಅಧಿಕಾರಿವರ್ಗ ಸದನದ ಸದಸ್ಯರನ್ನು ಅಗೌರವದಿಂದ ನೋಡುವುದು ಸರಿಯಲ್ಲ. ಅವರನ್ನು ಕರೆಸಿ.

ಒಬ್ಬ ಸದಸ್ಯರು.—ಅಧಿಕಾರಿಳೇ ಈಗ ಮಂತ್ರಿಗಳಾಗಿ ಬಿಟ್ಟಿದ್ದಾರೆ.

ಅಧ್ಯಕ್ಷರು.—ರೇವಣಸಿದ್ದಯ್ಯನವರೇ, ಪ್ರಾರಂಭ ಮಾಡಿ. ಇನ್ನೂ ಐದು ನಿಮಿಷ ಕೊಡುತ್ತೇನೆ. ಚೆನ್ನಾಗಿ ಮಾತನಾಡುತ್ತಿದ್ದೀರಿ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಗೌರವಾನ್ವಿತ, ಸಾಚಾ ಮನುಷ್ಯ ಈ ದೇಶದಲ್ಲಿ ಯಾರಾದರೂ ಇದ್ದರೆ ಅವನು ರೈತ ಮಾತ್ರ. ಕೆಲವು ಅಧಿಕಾರಿಗಳೇನಿದ್ದರೆ ಅವರ ಅಧಿಕಾರವನ್ನು ಮೊಟಕು ಮಾಡಬೇಕಾಗುತ್ತದೆ. ನಾನು ಅದರ ಬಗ್ಗೆ ತಿದ್ದುಪಡಿ ಕೊಟ್ಟಿದ್ದೇನೆ. ರೈತನ ಶಕ್ತಿ ಕುಸಿದಿದೆ. ಇದು ಆಗಬಾರದು. ಅಧಿಕಾರಿಗಳ ಬಗ್ಗೆ ನನ್ನ ಸ್ನೇಹಿತರು ಹೇಳಿದ್ದಾರೆ. ಅಚಾತುರ್ಯ ಬಹಳ ನಡೆಯುತ್ತಿದೆ. ಅವರ ಹಕ್ಕುಗಳನ್ನು ಪಡೆಯುವುದಕ್ಕೆ ಅವರ ಅಸ್ತ್ರವಾಗಿ ಸ್ಟ್ರೈಕ್ ಮಾಡುತ್ತಿದ್ದಾರೆ. ಬುದ್ಧಿವಂತರು ಅವರು, ರೈತರಲ್ಲಿ ಬುದ್ಧಿವಂತರಿಲ್ಲ. ಶಾಸಕರಲ್ಲೂ ಅನೇಕರು ಅರೆಬುದ್ಧಿವಂತರು. ಸರ್ಕಾರಿ ನೌಕರರು ಮಾತ್ರ ಬುದ್ಧಿವಂತರು. ಬುದ್ಧಿವಂತಿಕೆಯಿಂದಲೇ ಅನುಕೂಲಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಜನರಿಗೆ ಏನು ಬೇಕು ಎಂಬುದನ್ನು ನೋಡುತ್ತಿಲ್ಲ. ನಾನು ಮಂತ್ರಿ ಮತ್ತೆ ಮಂತ್ರಿಯಾಗಿದ್ದೇನೆ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ತೆಗೆದುಕೊಂಡು ತಿದ್ದಿ, ಅಕಸ್ಮಾತ್ ಸರ್ಕಾರ ತಿದ್ದದೇ ಇದ್ದರೆ ಜನರೇ ಎದ್ದು ತಿದ್ದಬೇಕಾಗಿ ಬಂದಿತು. ಜಿಲ್ಲಾ ಮಟ್ಟದಲ್ಲಿ ಇರಬಹುದು, ಹಳ್ಳಿ ಮಟ್ಟದಲ್ಲಿರಬಹುದು ಸರ್ಕಾರಿ ನೌಕರರು ತಾವು ತೆಗೆದುಕೊಳ್ಳತಕ್ಕ ಸಂಬಳಕ್ಕೆ ಕೃತಜ್ಞರಾಗಿ ನಡೆದುಕೊಳ್ಳಬೇಕು. ರೈತರು ದಡ್ಡರು. ಈ ದೇಶ ದಡ್ಡರ ದೇಶ. ಅದನ್ನು ತಿಳಿದುಕೊಂಡ ನೌಕರರು ಕೆಲಸ ಮಾಡಬೇಕು ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡತಕ್ಕ ಯತ್ನವನ್ನು ಮಾಡುತ್ತಿದ್ದೇನೆ. ಈ ಸರ್ಕಾರದಿಂದ ಕೆಲವು ಒಳ್ಳೆಯ ಕೆಲಸಗಳಾಗಿವೆ. ಅದನ್ನು ಹೇಳದೇ ಬಿಡುವುದಕ್ಕಾಗುವುದಿಲ್ಲ. ಎರಡು ರೂಪಾಯಿಗೆ ಅಕ್ಕಿಯನ್ನು ಕೊಟ್ಟು ಸಹಾಯ ಮಾಡಿದ್ದಾರೆ. ನಾವು ಮೊದಲು ರೈತ ಸಂಘದಿಂದ ಮಾಡಿದ್ದೆವು. ಈಗ ಹೆಗ್ಡೆಯವರು ಅದೇ ಯೋಜನೆಯನ್ನು ಮಾಡಿದ್ದಾರೆ, ಈ ಯೋಜನೆ ಆರಂಭ ಆಗದೇ ಇದ್ದಿದ್ದರೆ ಕಾಳಿನ ಅಭಾವ ಬಹಳಷ್ಟು ಇರುತ್ತಿತ್ತು. ಈ ಯೋಜನೆಯಿಂದ ಉತ್ತಮ ಕೆಲಸವಾಗಿದೆ. ಬಡವರಿಗೆ ನೇರವಾಗಿ ಸಹಾಯವಾಗಿದೆ. ೪ ರೂಪಾಯಿಗೆ ಸಿಗತಕ್ಕ ಅಕ್ಕಿ ಎರಡು ರೂಪಾಯಿಗೆ ಸಿಗುವುದರಿಂದ ಅನುಕೂಲವಾಗಿದೆ. ಇದಲ್ಲದೆ ಅಗ್ಗದ ಬಟ್ಟೆ ಕೊಡುತ್ತಿದ್ದಾರೆ. ಇದೂ ಒಳ್ಳೆಯದು. ರೈತರ ಪರಿಸ್ಥಿತಿ ಅಧ್ಯಯನಕ್ಕೆ ಸಮಿತಿ ಮಾಡಿ ಎಂದು ಹೇಳಿದ್ದೆ. ಇವತ್ತಿನ ದಿವಸ ಒಂದು ಸಮಿತಿ ಮಾಡಿ ರೈತ ಸಂಘದ ಅಧ್ಯಕ್ಷರಾಗಿದ್ದಂಥ ಶಂಕ್ರಿ ಕೊಪ್ಪ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇದಕ್ಕಾಗಿ ಸರ್ಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ ಇದು ಶ್ಲಾಘನೀಯವಾದ ವಿಚಾರ ಎಂದು ಹೇಳಬಯಸುತ್ತೇನೆ ಈಗಾಗಲೇ ಅಧ್ಯಕ್ಷರು ಮುಗಿಸಿ ಎಂದು ಹೇಳಿರುವುದರಿಂದ ಹೆಚ್ಚಿಗೆ ಕಾಲಾವಕಾಶ ತೆಗೆದುಕೊಳ್ಳದೆ ನನ್ನ ಮಾತುಗಳನ್ನು ಮುಗಿಸುತ್ತೇನೆ.

೪-೩೦ ಪಿ. ಎಂ.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶ್ರೀ ಜೆ. ಎಚ್. ಪಟೇಲರ ಸರ್ಕಾರ ಕರ್ನಾಟಕದಲ್ಲಿ ಬಂದು.....ಏಕೆಂದರೆ ಅವರನ್ನೇ ನಾನು ಇಲ್ಲಿ ಸಂಭೋದಿಸಿ ಮಾತ ನಾಡಬೇಕಾಗಿದೆ. ಕಾರಣ ಬೇರೆ ಯಾರೂ ಇಲ್ಲಪಲ್ಲ.

ಅಧ್ಯಕ್ಷರು.—ಬೇರೆ ಮಂತ್ರಿಗಳೂ ಇದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ನನ್ನ ದೃಷ್ಟಿಕೋನಕ್ಕೆ ಅವರೇ ಕಾಣುತ್ತಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ತಾವು ಮಾತನಾಡುತ್ತೀರೆಂದೇ ನಾನು ಬಂದಿದ್ದೇನೆ, ಮಾತನಾಡಿ.

ಅಧ್ಯಕ್ಷರು.—ನಿಮ್ಮ ಕಡೆ ೬೬ ಜನ ಇದ್ದರೆ ಅವರ ಕಡೆ ೧೩೭ ಜನ ಇದ್ದಾರೆ. ಇದರ ಪ್ರಕಾರ ನೋಡುವುದಾದರೆ ಈಗ ಸದನದಲ್ಲಿ ಇವರೇ ಹೆಚ್ಚಿಗೆ ಇದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸರ್ಕಾರ ಭಾಷಣವನ್ನು ಕೇಳಬೇಕು. ಈಗ ಅವರ.....

ಅಧ್ಯಕ್ಷರು.—ನಿಮ್ಮ ಶಾಡೋ ಕ್ಯಾಬಿನೆಟ್‌ನಲ್ಲಿ ೩ ಜನ ಇದ್ದೀರಿ.

SRI M. VEERAPPA MOILY.—Shadow Cabinet is invisible cabinet. ಆದುದರಿಂದ ನಾವು ಕಾಣಬೇಕು. ನಾವು ಕೆಂಡರೂ ಕಾಣದಹಾಗೆ ಇರಬೇಕು. ಅದೇ ಶಾಡೋ ಕ್ಯಾಬಿನೆಟ್‌ನ ವೈಖರಿ. ಕಳೆದ ೩ ವರ್ಷಗಳಿಂದ ಮಾನ್ಯ ಪಟೇಲರ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಕೆಲಸ ಮಾಡುತ್ತಾ ಇದೆ, ಇದು ಏನೂ ಬಹಳ ಕಡಿಮೆ ಅವಧಿ ಅಲ್ಲ. ೧ ವರ್ಷದಲ್ಲಿ ಅವರು ಹೇಳ ಬಹುದು, ನಾವು ಇನ್ನೂ ಕಲಿಯುತ್ತಾ ಇದ್ದೇವೆ ಎಂದು. ಎರಡನೇ ವರ್ಷ ಅವರು ಹೇಳಬಹುದು, ನಾವು ಆಲೋಚನೆ ಮಾಡಿದ್ದೇವೆ ಎಂದು. ಆದರೆ ೩ನೇ ವರ್ಷದಲ್ಲಾದರೂ ಈ ರಥದ ಒಂದು ಛಾಟಿ ಯನ್ನು ಹಿಡಿದುಕೊಂಡು ಮುಂಜೂಗೆಯಲ್ಲಿ ಹೋಗುವಾಗ ನಾವು ಪ್ರಗತಿಯ ಹೆಜ್ಜೆಯ ಕುರುಹನ್ನು ಕಾಣಬಹುದು. ಆದರಿಂದ ಅವರು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದೂ ಕೂಡಾ ಯಾವ ಕಾಲದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಿತು ಎಂಬುದು ಬಹಳ ಪ್ರಾಮುಖ್ಯ. ಆರನೇ ಪಂಚ ವಾರ್ಷಿಕ ಯೋಜನೆಯ ಕೊನೆ, ೨ ವರ್ಷದ ಒಂದು ಕಾರ್ಯಕ್ರಮವನ್ನು ಅಮಾನ್ಯ ಮಾಡತಕ್ಕ ಮಹತ್ವದ ಕಾಲದಲ್ಲಿ ಅವರು ಅಧಿಕಾರಕ್ಕೆ ಬಂದಿದ್ದಾರೆ. ೩ ವರ್ಷಗಳ ಒಂದು ಇನ್‌ವೆಸ್ಟ್‌ಮೆಂಟ್ ಪೀರಿಯಡ್ ಆದಮೇಲೆ, ನಂತರದ ೨ ವರ್ಷದ ಟೇಕ್ ಆಫ್ ಪೀರಿಯಡ್‌ನಲ್ಲಿ ಎಂದರೆ, ಒಂದು ಯೋಜನೆಯ ಅವಧಿಯಲ್ಲಿ ಯಾವಾಗ ಫಲ ಸಿಗಬೇಕೋ ಆವಾಗ, ಅಂತಹ ಒಂದು ಮಹತ್ವದ ಕಾಲದಲ್ಲಿ ಅಧಿಕಾರಕ್ಕೆ ಬಂದಿದ್ದಾರೆ. ಅನಂತರ ೭ನೇ ಯೋಜನೆಯನ್ನು ರೂಪಿಸಿ ಹೊಸ ಸಂತಸದ, ಹೊಸ ಭರವಸೆಗಳನ್ನು ಕೊಡತಕ್ಕ ಕಾಲದಲ್ಲಿ ತಾವು ಅಧಿಕಾರಕ್ಕೆ ಬಂದಿದ್ದೀರಿ. ಇದು ಬಹಳ ಮಹತ್ವದ ವಿಚಾರ. ಅಂತಹ ಒಂದು ಮಹತ್ವದ ಕಾಲದಲ್ಲಿ ಅಧಿಕಾರಕ್ಕೆ ಬಂದ ತಾವು ಎಷ್ಟರಮಟ್ಟಿಗೆ ಪ್ರಚಲಿತ ವಾದ ಸವಾಲುಗಳನ್ನು ಎದುರಿಸಿ ಕರ್ನಾಟಕ ರಾಜ್ಯದ ಮುನ್ನಡೆಯನ್ನು ಸಾಧಿಸುವುದಕ್ಕೆ ಕಾರಣೀಭೂತ ರಾಗಿದ್ದೀರಿ, ಎಷ್ಟು ಜವಾಬ್ದಾರಿಯುತವಾದ ಕೆಲಸವನ್ನು ಮಾಡಿದ್ದೀರಿ ಎಂಬುದರ ಬಗ್ಗೆ ವಿಮರ್ಶೆಯ ಸಿಂಹಾವಲೋಕನ ಮಾಡುವುದಕ್ಕೆ ಪ್ರಾಮುಖ್ಯವಾಗಿ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ನಿಡುವ ಸಮಯದ ಅವಕಾಶವನ್ನು ತೆಗೆದುಕೊಳ್ಳತಕ್ಕದ್ದು ಈ ಸದನದ ಪರಂಪರೆ ಈಗ ನಾನು ಒಂದನ್ನು ನಿರೀಕ್ಷೆ ಮಾಡಿದ್ದೆ ರಾಜ್ಯಪಾಲರ ಒಂದು ಸ್ಥಾನದ ಮಹತ್ವ ಅಥವಾ ಕೇಂದ್ರ ರಾಜ್ಯದ ಒಂದು ಸಂಬಂಧದ ವಿಚಾರದಲ್ಲಿ ಈ ದೇಶದಲ್ಲಿ ಒಂದು ಹೊಸ ಸಿದ್ಧಾಂತವನ್ನು ರೂಪಿಸಿದ ರಾಮಕೃಷ್ಣ ಹೆಗ್ಡೆ ಯವರು, ತಾವೂ ಕೂಡಾ ಆ ಸಿದ್ಧಾಂತವನ್ನೇ ಅನುಷ್ಠಾನದ ರೂಪದಲ್ಲಿ ತರತಕ್ಕ ವಿಚಾರದಲ್ಲಿ ಪ್ರಯತ್ನ ಮಾಡುತ್ತಾರೆಂದು ನಮ್ಮ ಆಸೆ ಇತ್ತು. ರಾಜ್ಯಪಾಲರಿಗೆ ಭಾಷಣ ಮಾಡುವುದಕ್ಕೆ ಸ್ವಾತಂತ್ರ್ಯ ಕೊಟ್ಟು, ಅವರೇ ಭಾಷಣ ಮಾಡಿ, ಅದು ನಮ್ಮಲ್ಲಿ ಐತಿಹಾಸಿಕವಾಗಿ ಮುಂದೆ ಹೋಗತಕ್ಕ ದೃಷ್ಟಿ ಯಲ್ಲಿ ಕನ್ನಡಿಯಾಗಲಿ ಎಂದು ನಮ್ಮ ಪ್ರಜಾಪ್ರಭುತ್ವವಾದಿ ಸನ್ಮಾನ್ಯ ಹೆಗ್ಗಡೆಯವರು ಹೇಳಿಬಿಟ್ಟು ದಾಗಿತ್ತು. ಆದರೆ ಅವರ ಭಾಷಣವನ್ನು ನೋಡಿದ ಮೇಲೆ ಆ ಸ್ವಾತಂತ್ರ್ಯವನ್ನು ಕಿತ್ತುಕೊಂಡಿದ್ದಾರೆ. ರಾಮಕೃಷ್ಣ ಹೆಗ್ಡೆಯವರ, ಜೆ. ಎಚ್. ಪಟೇಲರವರ ಭಾಷಣವನ್ನು ರಾಜ್ಯಪಾಲರ ಮುಖಾಂತರ ನಾವು ಕೇಳಿದ್ದೇವೆ. ಇವಕ್ಕೆ ನಾವು ವಿಷಾದ ಸೂಚಿಸಬೇಕೇ ? ನಾವು ನಿಮ್ಮ ಸ್ಥಾನದಲ್ಲೇ ಇದ್ದು ಕೊಂಡು ಮಾತನಾಡುತ್ತೇವೆ, ಈ ಬಗ್ಗೆ ತಾವು ರಾಜ್ಯಪಾಲರಿಗೇ ಬಿಡಬೇಕಾಗಿತ್ತು. ಅವರು

ಸ್ವತಂತ್ರವಾಗಿ ಭಾಷಣ ಮಾಡುತ್ತಿದ್ದರು. ತಮ್ಮ ಭಾಷಣವನ್ನು, ತಮ್ಮ ಹೊಗಳಿಕೆಯನ್ನು ರಾಜ್ಯಪಾಲರ ಮಂಜೂರಾತರ ತಾವು ಏಕೆ ಮಾಡಿದ್ದೀರಿ ? ಏಕೆಂದರೆ ಉಪದೇಶ ಮಾಡುವುದು ಬಹಳ ಸುಲಭ. ಅವರಂ ಭಾಷಣ ಮಾಡಬಹುದಿತ್ತಲ್ಲವೇ ? ನೀವು ಏಕೆ ಬರೆದುಕೊಡಬೇಕಾಗುತ್ತಿತ್ತು ? ರಾಜ್ಯಪಾಲರ ಸ್ಥಾನಮಾನದ ವಿಚಾರದಲ್ಲಿ ಇವರು ಕೇಂದ್ರದ ಕೈಗೊಂಬೆ ಎಂದು ಹೇಳಿದಿರಿ. ಈಗ ನಿಮ್ಮ ಕೈಗೊಂಬೆ ಎಂದು ಜನತೆ ತಿಳಿದುಕೊಳ್ಳತಕ್ಕ ಕೆಲಸವನ್ನು ತಾವು ಏಕೆ ಮಾಡಿದ್ದೀರಿ ? ಅದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ತಾವು ಯಾವ ರೀತಿ ನಡೆ ಮತ್ತು ನುಡಿ, ಇವುಗಳ ಮಧ್ಯೆ ಎಷ್ಟು ಅಂತರವನ್ನು ಇಟ್ಟುಕೊಂಡು ಹೋಗುತ್ತಿದ್ದೀರಿ ಎನ್ನುವುದನ್ನು ಸೂಚ್ಯವಾಗಿ ಹೇಳುವುದಕ್ಕೆ ಈ ಪ್ರಸಂಗವನ್ನು ಉಪಯೋಗಿಸಿಕೊಂಡೆ ಅಷ್ಟೇ. ಬದಲಾಗಿ ನಿಮ್ಮಿಂದ ನಾವು ಹೊಸದನ್ನು ಏನನ್ನೂ ನಿರೀಕ್ಷೆ ಮಾಡುತ್ತಿದ್ದೇವೆಂದು ಹೇಳುತ್ತಾ ಇಲ್ಲ. ಇನ್ನು ನಾನು ವಿವರಕ್ಕೆ ಬರುತ್ತೇನೆ. ಕರ್ನಾಟಕದ ಪ್ರಗತಿ ಈ ಮೂರು ವರ್ಷಗಳಲ್ಲಿ ಖಂಡಿತವಾಗಿಯೂ ಕುಂಠಿತವಾಗಿದೆ. ಇದು ನಿಮ್ಮ ಅಂಕಿಸಂಖ್ಯೆಯಿಂದಲೇ ಕಾಣುತ್ತಾ ಇದೆ, ಯಾವ ಒಂದು ದೃಷ್ಟಿಯಲ್ಲಿ ನಾನು ಹೇಳುತ್ತಿದ್ದೇನೆಂದರೆ, ಆರನೇ ಯೋಜನೆಯ ೨ ವರ್ಷಗಳಲ್ಲಿ ಪ್ರಗತಿ ಎಷ್ಟು ಉನ್ನತ ಮಟ್ಟಕ್ಕೆ ಹೋಗಬೇಕಾಗಿತ್ತೊ ಅದು ಹೋದ ಮೇಲೆ ಏನೇ ಯೋಜನೆಯಲ್ಲಿ ಕಾಲಿಡುವಾಗ ಅದು ಮತ್ತಷ್ಟು ಎತ್ತರಕ್ಕೆ ಹೋಗಬೇಕಾಗಿತ್ತು. ಆಷ್ಟು ಪ್ರಗತಿಯಲ್ಲಿ ರಾಜ್ಯ ಹೋಗಿದೆಯೇ ? ಈ ಬಗ್ಗೆ ನಾನು ಹೆಚ್ಚು ವಿವರಕ್ಕೆ ಹೋಗುವುದಕ್ಕೆ ಕಾಲಾವಕಾಶ ಇಲ್ಲ. ಆ ಸಂದರ್ಭ ಬಂದಾಗ ನಾನು ಹೇಳುತ್ತೇನೆ. ಆದರೆ ಕೆಲವೊಂದು ಬಾಹ್ಯ ರೂಪಗಳನ್ನು, ರೂಪರೇಷೆಯನ್ನು ಮಾತ್ರ ಈ ಸದನದ ಮುಂಖಾಂತರ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೨೦ ಅಂಶಗಳ ಕಾರ್ಯಕ್ರಮ ಅನುಷ್ಠಾನ ಬಡವರಿಗೆ ಅನುಕೂಲವಾದಂತಹ ಕಾರ್ಯಕ್ರಮ. ಬಡವರನ್ನು ಬಡತನದ ರೇಖೆಯಿಂದ ಮೇಲಕ್ಕೆ ಎತ್ತತಕ್ಕ ಅನೇಕ ಕಾರ್ಯಕ್ರಮಗಳು ಇವೆ. ಇವರು ಹೇಳುತ್ತಾರೆ, ಎರಡು ಐಟಮ್‌ಗಳನ್ನು ತೆಗೆದುಕೊಂಡು ನಮ್ಮದು ಫಸ್ಟ್ ಎಂದು ಹೇಳುತ್ತಾರೆ, ನಾವು ಇಂತಹದ್ದರಲ್ಲಿ ದ್ವಿತೀಯ ಸ್ಥಾನದಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಯಾವುದು ಇವರಿಗೆ ಅನುಕೂಲವಾಗಿರುತ್ತದೋ ಅದನ್ನು ಹೆಕ್ಕಿ ತಾವು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಆದರೆ ೧೯೮೩-೮೪ರಲ್ಲಿ ಇಡೀ ವರ್ಷದಲ್ಲಿ, ಇಡೀ ವರ್ಷದ ಕಾರ್ಯಕ್ರಮದಲ್ಲಿ ೨೧ರಲ್ಲಿ ೧೫ ಕಾರ್ಯಕ್ರಮ ೧೫ programmes have been pushed to the third group. ಮೂರನೇ ಗುಂಪಿಗೆ ಹೋಗಿಬಿಟ್ಟಿವೆ. ಒಂದನೇ ಗುಂಪೂ ಇಲ್ಲ. ಎರಡನೇ ಗುಂಪೂ ಇಲ್ಲ. ಮೂರನೇ ಗುಂಪು. ಬಡವರಿಗೆ ಅನುಕೂಲವಾಗುವ ಒಂದು ಕಾರ್ಯಕ್ರಮ, ಗ್ರಾಮೀಣ ಉದ್ಯೋಗ ಯೋಜನೆ. ಹೆಚ್ಚುವರಿ ಭೂಮಿ ವಿತರಣೆ, ಜೀತಪದ್ಧತಿಯಿಂದ ವಿಮುಕ್ತಿ. ಇವು ಸಮಾಜದ ಕಟ್ಟಕಡೆಯಲ್ಲಿ ಇರತಕ್ಕ ಜನರ ಒಂದು ಕಾರ್ಯಕ್ರಮ. ಇವೆಲ್ಲಾ ಕೊನೇ ಹಂತಕ್ಕೆ ಹೋಗಿವೆ. ೧೯೮೪-೮೫ರಲ್ಲಿ ಕೂಡಾ ಬಡ್ಜೆಟ್ ಮೇಲೆ ಭಾಷಣ ಮಾಡುವಾಗ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಇಷ್ಟು ಪ್ರಾಮುಖ್ಯವಾದ ಕಾರ್ಯಕ್ರಮಗಳ ಬಗ್ಗೆ ೧೯೮೪-೮೫ರ ಭಾಷಣವನ್ನು ನೋಡಿದರೂ ಕೂಡಾ, ಈ ಕಾರ್ಯಕ್ರಮಗಳಲ್ಲಿ ಕೂಡಾ ನಾವು ಬಹಳ ಹಿಂದೆ ಹೋಗಿಬಿಟ್ಟಿದ್ದೇವೆ. ಏಳೆಂಟು ಕಾರ್ಯಕ್ರಮಗಳಲ್ಲಿ ಕೂಡಾ ಅದು ಜೀತ ನಿರ್ಮೂಲನ ಬರುತ್ತದೆ, ಹೆಚ್ಚುವರಿ ಭೂಮಿ ವಿತರಣೆ ಬರುತ್ತದೆ, ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಹಿಂದೆ ಹೋಗಿದ್ದೀರಿ. ಈ ಇಲ್ಲಾ ಕಾರ್ಯಕ್ರಮಗಳ ವಿವರವನ್ನು ಹೇಳುವುದಕ್ಕೆ ಹೋಗಬಹುದು. ಆದರೆ ಹೇಳಿಕೊಳ್ಳತಕ್ಕ ಒಂದು ಪ್ರಗತಿ ೧೯೮೩-೮೪ರಲ್ಲಿ ಕೂಡಾ ಇಲ್ಲ, ೧೯೮೪-೮೫ರಲ್ಲಿ ಕೂಡಾ ಇಲ್ಲ, ೧೯೮೫-೮೬ರ ಬಗ್ಗೆ ನಮ್ಮ ಹತ್ತಿರ ಅಂಕಿಸಂಖ್ಯೆ ಇಲ್ಲ. ಅದನ್ನು ಹೇಳಬೇಕಾಗುತ್ತದೆ. ಯೋಜನಾ ವೆಚ್ಚ ಒಂದು ಅಭಿವೃದ್ಧಿಗೆ, ಪ್ರಗತಿಗೆ ಒಂದು ಮಾರ್ಗಸೂಚಿ. ನಾವು ಒಟ್ಟು ಖರ್ಚು ಮಾಡಿದ್ದೇವೆ. ಅದೂ ಕೂಡಾ ಆಧ್ಯತೆ ಪ್ರಾಮುಖ್ಯಅದೂಕೊಡಾ ಬಡತನವೇ ಪ್ರಾಮುಖ್ಯವಾಗಿ ಇರತಕ್ಕ ಈ ದೇಶದಲ್ಲಿ ನಾವು ಮೈಕ್ರೋ ಲೆವೆಲ್ ಡೆವಲಪ್‌ಮೆಂಟ್‌ನಲ್ಲಿ ಹೋಗಬೇಕು. ಇದಕ್ಕೆ ಆಧ್ಯತೆಯನ್ನು ಕೊಡಬೇಕಾಗುತ್ತದೆ. ಅದಕ್ಕಾಗಿನಾವು ಯೋಜನೆಯನ್ನು ಹಂಚಿಕೊಂಡಿದ್ದೇವೆ. ಯೋಜನಾ ವೆಚ್ಚದಲ್ಲಿ ಕೂಡಾ ಏನೇ ಯೋಜನೆಯಲ್ಲಿ ನಮ್ಮದು ೯ನೇ ಸ್ಥಾನದಲ್ಲಿ ಇತ್ತು.

೬ನೇ ಯೋಜನೆಯಲ್ಲಿ ೮ನೇ ಸಾ ನಕ್ಕೆ ಇಳಿದಿದ್ದೀರಿ. ಅದು ೫.೯ ಪರ್ಸೆಂಟ್. ೭ನೇ ಯೋಜನೆಯಲ್ಲಿ ೪.೯ ಪರ್ಸೆಂಟ್. ಅಂದರೆ ೯ನೇ ಸ್ಥಾನಕ್ಕೆ ಇಳಿದಿದ್ದೀರಿ. ಇದನ್ನು ನೋಡಿದರೆ ೬ನೇ ಯೋಜನೆಯಿಂದ ೭ನೇ ಯೋಜನೆಗೆ ಹೋಗುವಾಗ We are going to the anti climax of the whole plan development. ಇದಕ್ಕೆ ತಾವು ಯಾವ ರೀತಿ ಉತ್ತರ ಕೊಡುತ್ತೀರೋ

ನನಗೆ ಗೊತ್ತಿಲ್ಲ. ಇದನ್ನು ಕರ್ನಾಟಕದ ಜನತೆಗೆ ಮುನ್ನಡೆ ಎಂದು ಹೇಳುತ್ತೀರೋ ಅಥವಾ ಹಿನ್ನಡೆ ಎಂದು ಹೇಳುತ್ತೀರೋ ಗೊತ್ತಿಲ್ಲ. ಎಲ್ಲ ವಿಧದಿಂದಲೂ ಕೂಡ ನಮ್ಮ ರಾಜ್ಯದ ಸ್ಥಾನವನ್ನು ಹಿಂದಕ್ಕೆ ದೂಡುತ್ತಾ ಬಂದಿದ್ದೀರಿ. ಪರ್ ಕ್ಯಾಪಿಟಾ ಪ್ಲಾನ್ ಔಟ್‌ಲೇ ಓ ಮಂತ್ರಿ ಓನೇ ಯೋಜನೆಯಲ್ಲಿ ನೋಡಿದರೆ Here again there is an anti-climax. ಇಡೀ ದೇಶದಲ್ಲಿ ಓನೇ ಯೋಜನೆಯಲ್ಲಿ ಓನೇ ಸ್ಥಾನದಲ್ಲಿದ್ದದ್ದು ಓನೇ ಯೋಜನೆಯಲ್ಲಿ ೯ನೇ ಸ್ಥಾನಕ್ಕೆ ಇಳಿಯುವಂತೆ ಮಾಡಿದ್ದೀರಿ. ಅಂದರೆ ೩ ಸ್ಥಾನ ಕೆಳಗೆ ಇಳಿದಿದ್ದೀರಿ. ಈಗ ಇದನ್ನೆಲ್ಲಾ ನಾನು ಹೇಳಬೇಕಾಗಿತ್ತು. ಆದರೆ ಯೋಜನೆಯ ವಿಚಾರ ಸದನದ ಮುಂದೆ ಬಂದಾಗ ಹೆಚ್ಚು ವಿಶ್ಲೇಷಣೆ ಮಾಡಿ ನಾನು ಹೇಳುತ್ತೇನೆ. ಕರ್ನಾಟಕ ರಾಜ್ಯದ ಯೋಜನಾ ಕರ್ತರಿಗೆ, ರಾಜ್ಯದ ಹಣಕಾಸಿನ ಜವಾಬ್ದಾರಿಯನ್ನು ತೆಗೆದುಕೊಂಡವರಿಗೆ ಈ ಒಂದು ಪರಿಜ್ಞಾನ ಇದೆಯೋ, ಇಲ್ಲವೊ ನನಗೆ ಗೊತ್ತಿಲ್ಲ. ನಾನು ಹಿಂದೆ ಕೂಡ ಹೇಳಿದ್ದೇನೆ. You are going backward. I am not interested in my State going backward. We are all interested to push the State forward. We must make a collective effort. Even in private conversation I used to tell to many of your Hon. Ministers. ನಿಮ್ಮ ಕ್ಯಾಬಿನೆಟ್‌ನಲ್ಲಿ ಈ ವಿಚಾರವನ್ನು ಚರ್ಚೆ ಮಾಡಿ. Afterall it is not just a question of arithmatical figures. One place means we must have gone back by 10/15/20 years backward and it may take another 5/10/15 years again to recover ourseelves up. ಇದನ್ನು ನಾನು ಬಹಳ ಕಳವಳದಿಂದ ವಿಚಾರ ಮಾಡಬೇಕಾಗುತ್ತದೆ. We are here to share our ideas and efforts with you. Afterall it is a policy declaration. ಆದರೆ ಈ ಒಂದು ಪರಿಸ್ಥಿತಿಗೆ ನೀವು ಬರಬಾರದು. ಮಾನ್ಯ ರಾಜ್ಯಪಾಲರ ಭಾಷಣ ಒಂದು ಪಾಲಿಸಿ ಡಿಕ್ಲರೇಷನ್. ಅದು ನೀತಿ ನಿಯಮದ ವಿಚಾರ. ಈ ದೇಶವನ್ನು ಮುಂದಕ್ಕೆ ಕೊಂಡೊಯ್ಯತ್ತೇ ವೆಂದು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದನ್ನು ನಾವು ಸಂತೋಷದಿಂದ ಅಭಿನಂದಿಸಬಹುದು. To that extent I would have appreciated that there is a realisation on the part of the Government and they know it. You have your limitations. With all the limitations, we connot afford to push the state down. Afterall, in a race, Karnataka cannot lag behind. ಅದಕ್ಕೆ ತಾವು ಅವಕಾಶವನ್ನು ಕೊಡಬಾರದು

ಇನ್ನು ಸಂಪನ್ಮೂಲದ ಕೊರತೆಯ ವಿಚಾರದಲ್ಲಿ ಕೂಡ ನಾನು ಮಾತನಾಡ ಬೇಕಾಗುತ್ತದೆ. Afterall in per capita income we have gone below the national level. ಏನು ದುರಂತ ಇದು ? The national per capita income in the 7th Plan is Rs. 1010 whereas ours is Rs. 893.

Sri Y. K. RAMAIAH.—It is estimated.

SRI M. VEERAPPA MOILY.—It is an indicator.

ಶ್ರೀ ವೈ. ಕೆ. ರಾಮಯ್ಯ.—ಪಂಚವಾರ್ಷಿಕ ಯೋಜನೆ ಬಗ್ಗೆ ಇಡೀ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ಸಮಗ್ರವಾಗಿ ಯೋಚನೆ ಮಾಡಿದಾಗ ಓನೇ ಯೋಜನೆಯು ಕೊನೆಯಲ್ಲಿ ರಾಜ್ಯ ಸರ್ಕಾರ ಮಂತ್ತು ಕೇಂದ್ರಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಿದೆ, ಎಂಬುದನ್ನು ನೋಡಿ. ಆದರೆ ಓನೇ ಯೋಜನೆಯ ಮೊದಲಲ್ಲಿ ಎಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳಬೇಕಾಗಿದೆ. ಆರ್ಥಿಕ ಪರಿಸ್ಥಿತಿ ಎಷ್ಟು ಸಮರ್ಪಕವಾಗಿರುವುದಿಲ್ಲ.....

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಓನೇ ಪಂಚವಾರ್ಷಿಕ ಯೋಜನೆಯ ಮೊದಲು ಮಂತ್ತು ಓನೇ ಯೋಜನೆಯ ಕೊನೆಯವರೆಗೆ ನೋಡಿ. It goes up in the ladder. The graph goes up always. Climax tempo will have to be kept up. ಆದ್ದರಿಂದ

ತಾವು ಹೇಳುವುಂಥಾದ್ದು ಏನೂ ಇಲ್ಲ. Afterall it is an average. National average per capita income, per capita plan outlay is Rs. 1010 whereas ours is Rs. 893/-. This is your plan. ಇದು ಕರ್ನಾಟಕ ರಾಜ್ಯದ ಭವಿಷ್ಯ. ಇದು ಕರ್ನಾಟಕ ರಾಜ್ಯದ ರೂಪುರೇಷೆ. The people of Karnataka will have to be fitted in that outfit. This is the outfit you are going to be fitted in. That means you have to shrink yourself to fit in that. ಓನೇ ಪಂಚ ವಾರ್ಷಿಕ ಯೋಜನೆಯಲ್ಲಿ ಪರ್ ಕ್ಯಾಪಿಟಾ ಪ್ಲಾನ್ ಔಟ್‌ಲೇ ರಾಷ್ಟ್ರದ್ದು ೬೦೫ ರೂಪಾಯಿ ಇದ್ದರೆ, ನಮ್ಮದು ೭೬೬ ರೂಪಾಯಿ. It was above national average in the Sixth Five year Plan. This is the same thing with the 5th Plan. We were above the national average. This is for the first time that we have shrunk below the national average. This is a fact. Afterall resources in a plan will have to be backed up by resources. It is a cycle. In 1982-83 there was no resource gap whereas in 83-84 there was the resource gap of Rs. 189.08 crores. Though it went up to 289 crores it never came down. In the interim budget, resource gap was in the margin of 518 crores like that. ಅನಂತರ ಫೈನಲ್ ಬಜೆಟ್ ಕೊಟ್ಟಿದ್ದೀರಿ. ೪೦೦ ಕೋಟಿ ರೂ. ಏನು ಟ್ಯಾಕ್ಸ್ ಹೆಚ್ಚು ಕಲೆಕ್ಟ್ ಮಾಡಿದ್ದೀರಿ they have all been eaten by non-plan expenditure. You have taxed the people. The people have suffered, Not that you have made the people more confortable. During your period the people have suffered to the ever maximum extent. You collected the highest tax. ಕಳೆದ ೩ ವರ್ಷದಲ್ಲಿ ನೀವು ಎಷ್ಟು ಕಲೆಕ್ಟ್ ಮಾಡಿದ್ದೀರಿ ಎಂಬುದನ್ನು ಲೆಕ್ಕ ಹಾಕಿದರೆ ೪೦೦ ಕೋಟಿ ರೂಪಾಯಿ. ಇದಕ್ಕಾಗಿ ಪ್ಲಾನಿಂಗ್ ಕಮಿಷನ್‌ನವರು ನಿಮಗೆ ಶಹಭಾಸ್ ಎಂದು ಹೇಳಬಹುದು. But what have you done with that additional resources mobilisation ? That has been eaten away by the non-plan. ೬೦೦ ಕೋಟಿ ರೂಪಾಯಿ ಖರ್ಚಾಗಿದೆ. ಇವತ್ತು ನಾವು ಯಾವ ಪರಿಸ್ಥಿಗೆ ಬಂದಿದ್ದೇವೆಂದರೆ It is siphoned. Now we are in a very crucial stage. Sorry, I am using superlatives. ಇಂಥ ವೈಪರೀತ್ಯದ ಪರಿಸ್ಥಿತಿಯಲ್ಲಿ ನೀವು ವರ್ಣಿಸಿದ್ದೀರೆಂದು ಕಳೆದ ಸಾರಿ ಆಪಾದನೆಯನ್ನು.....

ಶ್ರೀ ಜೆ. ಹೆಚ್. ಪಟೇಲ್.—ಈ ಸಾರಿ ಮಾಡಿಲ್ಲ,

ಶ್ರೀ ಎಂ. ವೀರಪ್ಪಮೊಯ್ಲಿ.—ಈ ಸಾರಿ ಮಾಡಿಲ್ಲ. ಯಾವಾಗ ನಿಮಗೆ ಫೈನಲೈಸ್ ಮಾಡುವುದಕ್ಕೆ ಆಗಲಿಲ್ಲ ಅಂದರೆ When your rasources come down to that extent Central Assistance will also come down. ಏಕೆಂದರೆ ನೀವು ಮ್ಯಾಚಿಂಗ್ ಕಾಂಟ್ರಿಬ್ಯೂಷನ್ ಕೊಡುವುದಕ್ಕಾಗುವುದಿಲ್ಲ. When you don't spend on the plan, what happens is you don't draw the Central assistance.

ನೀವು ಸೆಂಟ್ರಲ್ ಅಸಿಸ್ಟೆನ್ಸ್ ಪ್ಲಾನಿಂಗ್‌ಗೆ ಬಂದಾಗ ಪ್ಲಾನ್‌ಗಾಗಿ ಎಷ್ಟು ಖರ್ಚು ಮಾಡುತ್ತೀರಿ? It will be recouped. ತಾವು ಪ್ಲಾನ್‌ಗಾಗಿ ಖರ್ಚುಮಾಡುತ್ತಿದ್ದೀರಿ. To that extent the content assistance will be curtailed. ಆದಕ್ಕೆ ಸೆಂಟ್ರಲ್ ಅಸಿಸ್ಟೆನ್ಸ್ ಕಡಿಮೆಯಾಗಿದೆ. ಅಸಿಸ್ಟೆನ್ಸ್ ಕೊಡುತ್ತಿಲ್ಲ ಎನ್ನುವ ಗೋಳನ್ನು ಇಡುತ್ತಿದ್ದೀರಿ. ನಿಮ್ಮ ತಲೆಗೆ ನೀವೇ ಕೈ ಹೊಡೆಯಬೇಕೆ ಹೊರತು ಬೇರೆ ಯಾರು ಹೊಡೆಯಲಿಕ್ಕೆ ಸಾಧ್ಯವಿಲ್ಲ. You have to be blamed We have to slap ourselves for our own sin and mistakes. ಬಹಳಷ್ಟು ಪ್ಲಾನ್‌ಗೆ ಖರ್ಚು ಮಾಡೋಣ so that we can draw maximum. ಸೆಂಟ್ರಲ್ ಅಸಿಸ್ಟೆನ್

ಕೊಟ್ಟದ್ದು ಅದು ಮಾನವ ಧರ್ಮ, ಅದು ಅವರು ಮಾಡಿದರು. We have seen to that there is no resource gap as far as plan funding is concerned. At least to that extent people would appreciate you. ಆದರೆ ನೀವು ನಾನ್ ಪ್ಲಾನ್‌ಗೆ ಖರ್ಚು ಮಾಡಿದ್ದೀರಿ. ಈ ವರ್ಷ ನಾನು ನೋಡಿದೆ. ಸನ್ಮಾನ್ಯ ಬೊಮ್ಮಾಯಿಯವರು ಆಮೇಲೆ ಮಾನ್ಯ ಮುಖ್ಯಮಂತ್ರಿಯವರು ಕೂಡ ಜಿಲ್ಲೆಗೆ ಪ್ಲಾನ್ ಡಿಸ್‌ಕಷನ್‌ಗೆ ಹೋದರು ಪ್ಲಾನ್ ಡಿಸ್‌ಕಷನ್‌ಗೆ ಹೋಗಿ ಬಹಳ ದೊಡ್ಡ ಹೇಳಿಕೆಯನ್ನು ಕೊಟ್ಟರು. ಪ್ಲಾನ್ ಡಿಸ್‌ಕಷನ್‌ಗೆ ಹೋಗಿ ಕೇಂದ್ರ ಸರ್ಕಾರವನ್ನು ದೂರಿದರು. ಇದರಿಂದ ನನಗೂ ಕೂಡ ಬೇಸರವಾಯಿತು. ಏತಕ್ಕೆಂದರೆ I am interested in getting more fund, money as far as plan is concerned. ಅವರು ಏನು ಮಾಡಿದರು ಅಂದರೆ ಅವರವರೇ ಹೊಗಳಿಕೊಂಡರು, ಎಕನಾಮಿಕ್ ಟೈಮ್ಸ್‌ನಲ್ಲಿ ರಿಸೋರ್ಸ್ ಎಪರ್ಟ್ಸ್ ರಿಪಾರ್ಡೆಡ್ ಎಂದು ಬಂದಿದೆ. NPC okays Rs. 751 crores annual plan outlay for the State ಎಂದು ಹೇಳಿ ಮಾನ್ಯ ಬೊಮ್ಮಾಯಿಯವರು ಸಂತೋಷವಾಗಿದೆ ಎಂದು ಹೇಳಿದ್ದಾರೆ. ಹಾಗೆಯೇ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸಂತೋಷವಾಗಿದೆ ಎಂದು ಹೇಳಿದ್ದಾರೆ. ಆದರೆ the only persons who was not happy was myself. I was not happy about it. ಅದನ್ನು ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಔಟ್‌ಲೇ ವಿಷಯದ ಡಿಟೇಲ್ಸ್‌ಗೆ ಬಂದರೆ ೧೯೮೫-೮೬ಕ್ಕೆ ೧೦೦ ಕೋಟಿ ರೂಪಾಯಿ ರೂಪಾಯಿ ವ್ಯತ್ಯಾಸ ಆಗಿತ್ತು. ಈಗ ೧೯೮೫-೮೬ ಅನ್ಯುಯಲ್ ಪ್ಲಾನ್ ೫೨೫ ಕೋಟಿ ರೂಪಾಯಿಗಳು ಇದ್ದರೂ ಕೂಡ ೧೦೦ ಕೋಟಿ ರೂಪಾಯಿ ಜಾಸ್ತಿಯಾಗಬಹುದು. ೧೯೮೫-೮೬ ಮತ್ತು ೧೯೮೬-೮೭ಕ್ಕೆ ಹೋದರೆ ಇನ್ನು ೧೦೦ ಕೋಟಿ ಆಗಬಹುದು. ಕಡೇ ಪಕ್ಷ ೨೫೦ ಕೋಟಿ ರೂಪಾಯಿ ಜಾಸ್ತಿಯಾಗಬಹುದು. To keep up the tempo of the develnpment, to keep up the climax of the development ಇದು ಆಗುವುದಿಲ್ಲ. ಇಂಟೀರಿಯಮ್ ಬಡ್ಜೆಟ್‌ನಲ್ಲಿ ಇದ್ದ ಬೋತಾ ೧೯೮೫-೮೬ರಲ್ಲಿ ರಿಸೋರ್ಸಸ್ ಜಾಸ್ತಿ ಮಾಡುವ ಮೂಲಕ ಕಡಿಮೆ ಮಾಡಿದಿರಿ. ಆಗ ನನಗೆ ಸಂತೋಷವಾಯಿತು They will keep up the tempo of development, We just thought ಕಳೆದ ವರ್ಷ ಎರಡು ಬಡ್ಜೆಟ್ ಬಂದಿತ್ತು, ಆಮೇಲೆ ಕಡಿಮೆಯಾಯಿತು, ೭೫೦ ಕೋಟಿ ಎಂದು ಹೇಳಿದ್ದೀರಿ. ಆದರೆ ೧೯೮೬-೮೭ರಲ್ಲಿ ೧೦೦ ಕೋಟಿ ಹೆಚ್ಚು ಮಾಡಿದಿರಿ. ೧೫೦-೨೦೦-೨೫೦ ಕೋಟಿ ರೂಪಾಯಿ ಜಾಸ್ತಿಯಾಗುವ ಬದಲು ಕಡಿಮೆ ಪಕ್ಷ ೧೦೦-೧೫೦ ಕೋಟಿ ಜಾಸ್ತಿಯಾದರೂ ೧೯೮೬-೮೭ರಲ್ಲಿ ಅನ್ಯುಯಲ್ ಪ್ಲಾನ್ ೯೧೦ ಕೋಟಿ ನಾರ್ಮಲ್ ಡೆವಲಪ್‌ಮೆಂಟ್ ಎಕಾನಮಿಯಲ್ಲಿ ಇರಬೇಕಾಗಿತ್ತು. ಆದರೆ ಈಗಿನ ಪರಿಸ್ಥಿತಿ ೭೫೦ ಕೋಟಿ ಮಾತ್ರ ಈವತ್ತು ತಾವು ಪ್ಲಾನ್‌ಗೆ ಮಾಡಿದ್ದೀರಿ. ಅಂದರೆ ಇಲ್ಲಿ ಸುಮಾರು ೩೦೦ ಕೋಟಿ ಅನ್ಯುಯಲ್ ಪ್ಲಾನ್‌ನಲ್ಲಿ ತಾವು ಕಡಿಮೆ ಮಾಡಿದ್ದೀರಿ. ೩೦೦ ಕೋಟಿ ರೂಪಾಯಿ ಪ್ಲಾನ್ ಡೆವಲಪ್‌ಮೆಂಟ್ ಅಪಹರಿಸಿ ಕರ್ನಾಟಕದ ರಾಜ್ಯದ ಜನತೆಯ ಒಂದು ಪ್ರಗತಿಯನ್ನು ಕಡಿಮೆ ಮಾಡಿದ್ದೀರಾ I must sayIt is a betrayal of the people of Karnataka. ಈವತ್ತು ಕರ್ನಾಟಕ ರಾಜ್ಯದ ಜನತೆಯ ಮುನ್ನೂರು ಕೋಟಿ ರೂಪಾಯಿಗಳನ್ನು ಅಪಹರಿಸುವ ಕಾರ್ಯ ಕರ್ನಾಟಕ ರಾಜ್ಯ ಸರ್ಕಾರ ನಡೆಸುತ್ತಿದೆ ಎಂದು ನೇರವಾದ ಆಪಾದನೆ ಮಾಡಬೇಕಾಗಿದೆ ನಿಮ್ಮ ಅನ್ಯುಯಲ್ ಪ್ಲಾನ್ ೭೨೦ ಕೋಟಿ ರೂಪಾಯಿ ಇತ್ತು. ಆಯೋಗದ ಜೊತೆ ಚರ್ಚೆ ಮಾಡಿದಮೇಲೆ ೪೦ ಕೋಟಿ ರೂಪಾಯಿ ಹೆಚ್ಚಿಗೆ ಕೊಟ್ಟರು. Practically you have resource only Rs. 7 0 Crores, not even Rs. 750 crores You must thank the Planning Commission for having got another Rs. 40 crores more. ಕರ್ನಾಟಕದ ಇತಿಹಾಸವನ್ನು ದಯವಿಟ್ಟು ನೋಡಿ, ಬಜೆಟ್ ಭಾಷಣದಲ್ಲಿ ಯಾವರೀತಿ ಪ್ಲಾನ್ ಡೆವಲಪ್‌ಮೆಂಟ್ ಕೊಟ್ಟಿರುತ್ತಾರೆ ಎಂಬುದನ್ನು ದಯವಿಟ್ಟು ನೋಡಿ. ಯಾವಾಗಲೂ ಕರ್ನಾಟಕಕ್ಕೆ ಒಂದು ಕ್ರೆಡಿಬಿಲಿಟಿ ಇತ್ತು. ಯೋಜನಾ ಆಯೋಗಕ್ಕೆ ಕರ್ನಾಟಕ ಟೀಮ್ ಹೋಗುವುದು ಎಂದರೆ They will walk in and out of the Planning Commission with what they ask for. This has been the oustanding credit. ಶ್ರೀಮಾನ್ ದೇವರಾಜ ಅರಸ್‌ರವರ ಕಾಲದಲ್ಲೂ ಸಹ ಈ ರೀತಿ ಇತ್ತು. ಆದರೆ ಈವತ್ತು We have come out from the Planning Commission with

disgrace. We are not in a position to get what we ask for. ಈ ಅಲ್ಪಶಕ್ತಿಯಿಂದಲೇ ಕರ್ನಾಟಕದ ಜನ ಬದುಕಬೇಕಾಗಿದೆ ಎಂದು ನಾನು ತಿಳಿದುಕೊಳ್ಳಬೇಕಾಗಿದೆ. ಅಲ್ಪತೃಪ್ತಿಯಿಂದ ಬದಕಬೇಕಾದ ಪ್ರಸಂಗ ಜನತೆಯು ಮುಂದೆ ಬಂದಾಗ, ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗತಕ್ಕಂಥ ರಾಜ್ಯಪಾಲರ ಭಾಷಣ ನಮಗೆ ಬೇಕಾಗಿತ್ತು. ಅಂಥ ಭಾಷಣ ಈವತ್ತು ನಮ್ಮ ರಾಜ್ಯಪಾಲರಿಂದ ಬರಲಿಲ್ಲ ಎನ್ನುವುದೇ ನಮಗೆ ವ್ಯಥೆಯಾಗಿದೆ. ಈವತ್ತು ಸಾರ್ವಜನಿಕ ರಂಗದ ಕೈಗಾರಿಕೆಗಳನ್ನು ತೆಗೆದುಕೊಂಡರೆ ಎಲ್ಲ ಕೆಂಪು ಪಟ್ಟಿಗೆ ಸೇರತಕ್ಕಂಥದ್ದಾಗಿರುತ್ತದೆ. ಅದು ತಾವೇ ನಿರ್ವಹಿಸತಕ್ಕಂಥ ಕೈಗಾರಿಕೆಗಳು ಇರಬಹುದು ಉದಾಹರಣೆಗೆ ಕೆ.ಎಸ್.ಆರ್.ಟಿ.ಸಿ. ಕೆ.ಇ.ಬಿ.ಕೆ.ಪಿ.ಸಿ. ಇಂಥ ಸಂಸ್ಥೆಗಳು ಇರಬಹುದು. ಕೆಎಸ್ಆರ್.ಟಿ.ಸಿಯನ್ನು ತೆಗೆದುಕೊಂಡರೆ ಅಕ್ಕು ಮಿಲೇಟೆಡ್ ಲಾಸ್ ೧೯೮೫-೮೫ಕ್ಕೆ ೭೬.೯೩ ಕೋಟಿ ಬಂದಿದೆ. ಪ್ರತಿವರ್ಷ ೨೦-೨೦ ಕೋಟಿ ಜಾಸ್ತಿಯಾಗುತ್ತಿರುವುದನ್ನು ತುಂಬದೆ ಹೋದರೆ ಅದನ್ನು ಕಡಿಮೆ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ೧೯೮೫-೮೬ಕ್ಕೆ ಮಾನ್ಯ ಸಿಂಧ್ಯಾರವರು ಸೆಂಚುರಿಯವನ್ನು ಮುಟ್ಟುತ್ತಾರೆ. ಅವರಿಗೆ ಸನ್ಮಾನ ಮಾಡಬೇಕಾಗುತ್ತದೆ, ೧೯೮೫-೮೬ಕ್ಕೆ ಬಸ್ಫೇರ್ ಜಾಸ್ತಿ ಮಾಡಿದ್ದಾರೆ. So, he will be the man of the match ಈ ಪರಿಸ್ಥಿತಿ ಇರತಕ್ಕದ್ದು

೫-೦೦ ಪಿ.ಎಂ.

ಅಧ್ಯಕ್ಷರು.—ಶ್ರೀ ಮೊಯಿಲಿಯವರೇ, ನಿಮಗೆ ಮಾತನಾಡಲು ಇನ್ನು ಎಷ್ಟು ನಿಮಿಷ ಕಾಲ ಬೇಕು? ಹದಿನೈದು ನಿಮಿಷಗಳಲ್ಲಿ ಮುಗಿಸುವ ಹಾಗಿದ್ದರೆ ನೀವು ಮಾತನಾಡಬಹುದು ಇದಕ್ಕೆ ನನ್ನ ಅಡ್ಡಿಯಿಲ್ಲ.

ಶ್ರೀ ಎಂ, ವೀರಪ್ಪ ಮೊಯಿಲಿ.—ನನಗೆ ಇನ್ನು ಕನಿಷ್ಟ ಅರ್ಧ ಗಂಟೆಯಾದರೂ ಬೇಕು. ಬೇಕಾದರೆ ನಾನು ನಾಳೆ ನನ್ನ ಮಾತನ್ನು ಮುಂದುವರೆಸುತ್ತೇನೆ.

ಅಧ್ಯಕ್ಷರು.—ಸರಿ ಹಾಗಾದರೆ, ಈಗ ಅರ್ಧಗಂಟೆ ಕಾಲಾವಧಿ ಚರ್ಚೆ ಇದೆ. ಅದನ್ನು ಈಗ ತೆಗೆದುಕೊಳ್ಳೋಣ. ಇನ್ನು ಶ್ರೀ ಮೊಹಮದ್ ಮೋಯಿನುದ್ದೀನ್ ಅವರು ನೀಡಿದ್ದ ರಾಜ್ಯದಲ್ಲಿ ನೀರಾವರಿ ಸಾಮರ್ಥ್ಯಕ್ಕೆ ಸಂಬಂಧಿಸಿದ ೧ (೮೮)ನೇ ಚುಕ್ಕೆ ಗುರುತಿನ ಪ್ರಶ್ನೆಗೆ ನೀಡಿದ ಉತ್ತರದಿಂದ ಉದ್ಭವಿಸಿದ ವಿಚಾರದ ಬಗ್ಗೆ ಅರ್ಧಗಂಟೆ ಕಾಲ ಚರ್ಚೆ.

## Half – an – Hour discussion

### Sub : Irrigation Potential in The State

ಶ್ರೀ ಮೊಹಮ್ಮದ್ ಮೋಯಿನುದ್ದೀನ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ನೀರಾವರಿ ಸಾಮರ್ಥ್ಯಕ್ಕೆ ಸಂಬಂಧಿಸಿದ ನನ್ನ ಪ್ರಶ್ನೆ ಮೇಲೆ ಅರ್ಧಗಂಟೆ ಚರ್ಚೆ ನಡೆಸಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. The only concern of mine is that we are entering the 21st century.....

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಬೇಕೆಂದು ಹೇಳುತ್ತೇನೆ. ಕನ್ನಡ ಗೊತ್ತಿದ್ದೂ ಮಾತನಾಡದೇ ಹೋದರೆ, ಅದು ನಮಗೆ ಅವಮಾನ ಮಾಡಿದ ಹಾಗೆ ಆಗುತ್ತದೆ.

(ಗೊಂದಲ)

ಶ್ರೀ ಮೊಹಮ್ಮದ್ ಮೋಯಿನುದ್ದೀನ್.—ಮಾನ್ಯ ಅಧ್ಯಕ್ಷರೇ. ಕನ್ನಡದಲ್ಲೇ ಮಾತನಾಡಬೇಕೆಂದರೆ ನನ್ನ ಅಡ್ಡಿಯೇನೂ ಇಲ್ಲ. ಆದರೆ ನಾನು ಕನ್ನಡದಲ್ಲಿ ಮಾತನಾಡಿದರೆ, ಅರ್ಧಗಂಟೆಯಲ್ಲಿ ಮುಂಗಿಸಬೇಕಾಗಿದ್ದಕ್ಕೆ ಒಂದೂವರೆ ಗಂಟೆ ಬೇಕಾಗುತ್ತದೆ. ತಾವು ಅವಕಾಶ ಕೊಟ್ಟರೆ ನಾನು ಪೂರ್ತಿ ಕನ್ನಡದಲ್ಲೇ ಮಾತನಾಡುತ್ತೇನೆ.